# ಪಾಠ–21

## ನಮಗೆ ಕೊಟ್ಟ ಅವಕಾಶಗಳು

ಕ್ರಿಸ್ತನು ತನ್ನ ಸಭೆಯನ್ನು ಸ್ಥಾಪಿಸಿದಾಗ, ಅಪೊಸ್ತಲರ ಕಾರ್ಯ 2ನೇಅಧ್ಯಾಯದಲ್ಲಿ ಬರೆದಿರುವಂತೆ "ಸಹೋದರರೇ  ನಾವೇನು ಮಾಡಬೇಕು" ಎನ್ನುವ ಪ್ರಶ್ನೆಗೆ ಮೊದಲನೇ ಸಾರಿ ಯೆಹೂದ್ಯರು ಪೇತ್ರನನ್ನು ಕೇಳಿದರು ಅದರ ಪೂರ್ತಿ ಸಾರಾಂಶವನ್ನು ಓದುವುದರಲ್ಲಿ ನಮಗೆ ಎಷ್ಟೂ ಸಂತೋಷವಾಗುತ್ತದೆ.

"ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರೂ ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೊ ಎಂಬಂತೆ ಪಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಯಿತು ಅವರು ಕೂತಿದ್ದ ಮನೆಯೆನ್ನೆಲ್ಲಾ ತುಂಬಿಕೊಂಡಿತು.....(1–2)ಆ ಸಪ್ಪಳವಾದಾಗ......(6ಎ)ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ ಮಾಡಿದನು......(14)ಇಸ್ರಾಯೇಲ್ ಜನರೇ, ನನ್ನ ಮಾತುಗಳನ್ನು ಲಾಲಿಸಿರಿ–ನಜರೇತಿನ ಯೇಸು ಇದ್ದಾನಲ್ಲಾ ದೇವರು ನಿಮಗೋ ತಿಳಿದಿರುವಂತೆ ಆತನ ಕೈಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕ ಕಾರ್ಯಗಳನ್ನೂ ನಿಮ್ಮಲ್ಲಿ ನಡೆಸಿ ಆತನನ್ನು ತನಗೆ ಮೆಚ್ಚಿಕೆಯಾದನೆಂದು ನಿಮಗೆ ತೋರಿಸಿಕೊಟ್ಟನು. ಆ ಯೇಸು ದೇವರ ಸಂಕಲ್ಪಕ್ಕೂ ಭವಿಷತ್‌ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು ನೀವು ಅನ್ಯ ಜನರ ಕೈಯಿಂದ  ಆತನನ್ನು  ದೇವರು ಮರಣವೇದನೆಗಳಿಂದ ಬಿಡಿಸಿ ಎಬ್ಬಿಸಿದನು; ಯಾಕೆಂದರೆ ಮರಣವು ಆತನನ್ನು ಹಿಡಿದುಕೊಂಡಿರುವುದು ಅಸಾಧ್ಯವಾಗಿತ್ತು......(22–24)ಆದ್ದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು  ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು.ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ–ಸಹೋದರರೇ ನಾವೇನು ಮಾಡಬೇಕು? ಎಂದು ಕೇಳಲು ಪೇತ್ರನು ಅವರಿಗೆ–ನಿಮ್ಮ ಪಾಪಗಳು ಪರಿಹಾರವಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ದೇವರ ಕಡೆಗೆ ತಿರಿಗಿಕೊಂಡು ಯೇಸು ಕ್ರಿಸ್ತನ ಹೇಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ  ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರದಲ್ಲಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ  ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು.....(36–39) ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು......(41)ಇವರು ಅಪೊಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ

ರೊಟ್ಟಿಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು. ಎಲ್ಲರಿಗೂ ಭಯ ಉಂಟಾಯಿತು, ಇದಲ್ಲದೆ ಅನೇಕ ಅಧ್ಭುತಕಾರ್ಯಗಳೂ ಅಪೊಸ್ತಲರ ಕೈಯಲ್ಲಿನಡೆದವು......(42–43).

ನಾವು ಸಹ ಈರೀತಿಯಾದ ಅವಕಾಶಗಳು ಇಗಲೂ ಇವೆ. ಇಂತಹ ಅವಕಾಶಗಳನ್ನು ಒದಗಿಸುತ್ತಿರುವ ಕ್ರಿಸ್ತನ ಸಮಾಧಾನ ಸಂದೇಶವನ್ನು ನಾವು ಅಂಗೀಕರಿಸುತ್ತಿದ್ದೇವಾ? ಆ ಸಂದರ್ಭದಲ್ಲಿ ಕೆಲವರು ತಿರಸ್ಕರಿಸಿದರು ಆದರೆ 3000 ಜನರು ಅದನ್ನು(ಸಮಾಧಾನ ಸಂದೇಶ) ಅಂಗೀಕರಿಸಿದರು ವಾಕ್ಯವನ್ನು ಅನುಸರಿಸಿ ಈ ರೀತಿಯಾಗಿ ನಡೆದುಕೊಂಡರು.

- ಅವರು ಸುವಾರ್ತೆಯನ್ನು ಕೇಳಿದರು ಅಂದರೆ ಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟನು, ಮರಣಹೊಂದಿ ಸಮಾದಿ ಮಾಡಲ್ಪಟ್ಟು, ತಿರಿಗಿ ಎಬ್ಬಿಸಲ್ಪಟ್ಟನು.
- ಅವರ ಹೃದಯದಲ್ಲಿ ಅಲಗು ನೆಟ್ಟಂತಾಯಿತು.
- ನಾವೇನು ಮಾಡಬೇಕು ಎಂದು ಕೇಳಿದರು.
- ಸುವಾರ್ತೆಸಂದೇಶವನ್ನು ಅಂಗೀಕರಿಸಿದರು.

ಎ.ಮಾರುಮನಸ್ಸು ಹೊಂದಿದರು.

ಬಿ.ಅವರ ಪಾಪಗಳ ಕ್ಷಮಾಪಣೆಗೋಸ್ಕರ ಯೇಸುಕಿಸ್ತನ ಹೆಸರಿನಲ್ಲಿ ದೀಕ್ಷಸ್ನಾನ (ಮುಳುಗಿಸಿವುದು)ಹೊಂದಿದರು.

- ಪರಿಶುದ್ಧಾತ್ಮವರವನ್ನು ಹೊಂದಿದರು.
- ಮೂರು ಸಾವಿರ ಜನರು ಯೇಸುಕ್ರಿಸ್ತನ ಶಿಷ್ಯರ ಸಂಖ್ಯೆಯಲ್ಲಿ ಸೇರಿಸಲ್ಪಟ್ಟರು.
- ಅವರೆಲ್ಲರೂ ಇವುಗಳಲ್ಲಿ ನಿರತರಾಗಿದ್ದರು.

1. ಸಹವಾಸದಲ್ಲಿಯೂ
2. ಪ್ರಾರ್ಥನೆಯಲ್ಲಿಯೂ
3. ರೊಟ್ಟಿ ಮುರಿಯುವುದರಲ್ಲಿಯೂ
4. ಕಾಣಿಕೆ ಕೊಡುವುದರಲ್ಲಿಯೂ

ಕೇಳಿದವರೆಲ್ಲರೂ ಒಂದು ತೀಮಾನವನ್ನು ತೆಗೆದುಕೊಂಡ ವಿಷಯವನ್ನು ನಾವು ಇಲ್ಲಿ ಗಮನಿಸಬಹುದು. ಆ ನಿರ್ಣಯವು ಅಂದರೆ ಸಮಾಧಾನ ಸಂದೇಶ ಸುವಾರ್ತೆಯನ್ನು ಅಂಗೀಕರಿಸುವುದಾಗಿರಬಹುದು ಅಥವಾ ತಿರಸ್ಕರಿಸುವುದಾಗಿರಬಹುದು ಯಾವುದೊಂದು ಅಗಿರಬಹುದು. ಈ ಸಮಾಧಾನ ಸಂದೇಶ ಸುವಾರ್ತೆಯನ್ನು ಕೇಳುವುದಕ್ಕೆ ನಾವು ಈ ದಿನ

ನಮಗೆ ಅನೇಕ ಮಾರ್ಗಗಳಿವೆ. ಕೆಲವರು ಆಸಕ್ತಿಯಿಂದ ಬೈಬಲ್ ಓದುವುದರ ಮೂಲಕ ಅಥವಾ ಬೇರೊಬ್ಬ ಸಹಾಯದಿಂದ ಬೈಬಲ್‌ನ್ನು ಪರಶೀಲಿಸುವುದರ ಮೂಲಕ ಅಥವಾ ಇಂಟರ್‌ನೆಟ್ ಮೂಲಕ, ಪತ್ರಿಕೆಗಳು, ಬೈಬಲ್ ತರಗತಿಗಳ ಮೂಲಕ ಸುವಾರ್ತೆ ಸಂದೇಶವನ್ನು ತಿಳಿದುಕೊಳ್ಳುತ್ತಿದ್ದೇವೆ. ಕ್ರಿಸ್ತನ ಸುವಾರ್ತೆಯನ್ನು ಕೇಳಿದವರು ಅಥವಾ ಶಿಷ್ಯರಾಗಿ ಅನುಸರಿಸುವವರು, ರಕ್ಷಣೆಹೊಂದುವಷ್ಟು ವಿಶ್ವಾಸ ಅವರಲ್ಲಿ ಉಂಟಾದಾಗ ಅವರು ನೀರಿನಲ್ಲಿ ಮುಳಿಗಿಸುವುದರ ಮೂಲಕ ದೀಕ್ಷಾಸ್ನಾನ ಹೊಂದಿ ಅವರ ಪಾಪಗಳಿಗೆ ಕ್ಷಮಾಪಣೆ ಹೊಂದುವ ಅವಕಾಶವನ್ನು ದೇವರು ಕಲ್ಪಿಸುತ್ತಿದ್ದಾನೆ.

ಪ್ರಶ್ನೆಗಳು:

1.ಅಮಾಧಾನ ಸಂದೇಶವೆಂದರೆ ಏನು?

**a.**ಕ್ರಿಸ್ತನ ಮರಣ **b.**ಕ್ರಿಸ್ತನ ಸಮಾಧಿ

**c.**ಕ್ರಿಸ್ತನ ಪುನರುತ್ಥಾನ **d.**ಕ್ರಿಸ್ತನು ತಿರಿಗಿ ಮತ್ತೆ ಪರಲೋಕಕ್ಕೆ ಹೋಗುವುದು

**e.**ಮೇಲಿನ ಎಲ್ಲವೂ **f.**ಇವು ಯಾವು ಅಲ್ಲ

2.ಕೇಳಿದವರೆಲ್ಲರೂ ಏನು ಮಾಡಿದರು?

**a.**ಸಂದೇಶವನ್ನು ಅಂಗೀಕರಿಸಿದರು

**b.**ಸಂದೇಶವನ್ನು ತಿರಸ್ಕರಿಸಿದರು

**c.**ಯಾವುದೋಂದು ನಿರ್ಣಯತೆಗೆದುಕೊಂಡರು

3.ಸಂದೇಶವನ್ನು ಅಂಗೀಕರಿಸಿದವರು?

**a.**ಮಾರು ಮನಸ್ಸು ಹೊಂದಿದರು **b.**ದೀಕ್ಷಾಸ್ನಾನ ಹೊಂದಿದರು

**c.**ಪರಿಶುದ್ಧಾತ್ಮ ವರವನ್ನು ಹೊಂದಿದರು **d.**ಮೇಲಿನ ಎಲ್ಲವೂ

4.ಅಂಗೀಕರಿಸಿದವರು ಇವುಗಳ ಸಹವಾಸದಲ್ಲಿದ್ದರು

**a.**ಯೇಸು ಕ್ರಿಸ್ತನ ಬೋಧನೆಯನ್ನು ಹೆಚ್ಚಾಗಿ ಕಲಿಯುತ್ತಿದ್ದರು.

**b.**ಅವರ ಹಳೆಯ ಕೆಲಸಗಳಲ್ಲಿ, ಸ್ನೇಹಿತರೊಂದಿಗೆ ಸೇರಿ ಹೋದರು

**c.**ಕ್ರಿಸ್ತನನ್ನು ಅಂಗೀಕರಿಸಿದವರೊಂದಿಗೆ  ರೊಟ್ಟಿ ಮುರಿಯುತ್ತಿದ್ದರು

**d.**ಮೇಲಿನ ಎಲ್ಲವೂ    **e.**ಎ ಮತ್ತು ಸಿ

**f.**ಬಿ ಮತ್ತು ಸಿ

5.ಸುವಾರ್ತೆ ಸಂದೇಶ ಎಲ್ಲರಿಗೂ  ಲಭ್ಯವಗುತ್ತಿದೆ.

**a.**ಸರಿ        **b.**ತಪ್ಪು

***

## ಪಾಠ–22

## ನೂತನ ಸೃಷ್ಟಿ

"ಹೀಗಿರಲಾಗಿ ಯಾವನಾದರು ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿ ಯಾದನು"(2ಕೋರಿಂಥ5:17).

"ಯೇಸುವಿನಲ್ಲಿರುವ ಸತ್ಯೋಪದೇಶವು ಯಾವುದೆಂದರೆ–ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು ತೆಗೆದು ಹಾಕಿಬಿಡಬೇಕು ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟುಹೋಗುವಂಥದ್ದು"(ಎಫೆಸ4:22).

"ಮೋಸಗಾರರೆನಿಸಿಕೊಂಡವರೂ ಸತ್ಯವಂತರೂ, ಅಜ್ಞಾತರೆನಿಸಿಕೊಂಡವರೂ ವಿಜ್ಞಾತರೂ, ಸಾಯುವವರಾಗಿ ತೋರಿದರೂ ಬದುಕುವವರು ಆಗಿದ್ದೇವೆ. ಶಿಕ್ಷೆಹೊಂದುವವರಾಗಿದ್ದರೂ ಕೊಲ್ಲಲ್ಪಡದವರೂ. ದುಃಖಪಡುವವರಾಗಿದ್ದರೂ ಯಾವಾಗಲೂ ಸಂತೋಷಪಡುವವರೂ, ಬಡವರಾಗಿದ್ದರೂ ಅನೇಕರಿಗೆ ಐಶ್ವರ್ಯವನ್ನುಂಟುಮಾಡುವವರೂ, ಏನೂ ಇಲ್ಲದವರಾಗಿದ್ದರೂ ಎಲ್ಲಾ ಇದ್ದವರೂ ಆಗಿದ್ದೇವೆ"(2ಕೋರಿಂಥ6:9–10).

"ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಯಾವವೆಂದರೆ–ಜಾರತ್ವ ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೆಕಿಚ್ಚು ಸಿಟ್ಟು ಕಕ್ಷಾಭೇದ ಭಿನ್ನ ಮತ ಮತ್ಸರ ಕುಡಿಕತನ ದುಂದೌತಣ ಇಂಥವುಗಳೇ. ಇವುಗಳ ವಿಷಯದಲ್ಲಿ–ಇಂಥ ಕಾರ್ಯಗಳನ್ನು ನಡೆಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತಿದ್ದೇನೆ"(ಗಲತ್ಯ5:19–21).

ಆದ್ದರಿಂದ ನಮ್ಮ ಪಾಪಗಳ ದೆಸೆಯಿಂದ ಅಪರಾಧಗಳ ದೆಸೆಯಿಂದ ಸತ್ತವರಾಗಿ ಕ್ರಿಸ್ತನಕೂಡ ನಮ್ಮನ್ನು ಎಬ್ಬಿಸುವನು.

### ಸಮಾಧಿ(ಪಾಪದ ಶರೀರ):

ಅಂತಹ ಪಾಪವು ಮನಷ್ಯನನ್ನು ಸಮಾಧಿ ಮಾಡಿ ನೂತನ ಸೃಷ್ಟಿಯಾಗಿ ನಾವು ಬದಲಾಗಬೇಕಿದೆ ಒಂದು ಬೀಜವು ಭೂಮಿಯಲ್ಲಿ ಬಿತ್ತಿದ ಮೇಲೆ ಅದರೊಳಗಿಂದ ಒಂದು ಹೊಸ ಮೊಳಕೆ ಬೆಳೆಯುವುದು. ಅದೇರೀತಿಯಾಗಿ ಪಾಪ ಮಾಡಿದ ಮನುಷ್ಯನು ವಾಕ್ಯವನ್ನು

ಒಪ್ಪಿಕೊಂಡು ಕ್ರಿಸ್ತನ ಮರಣದಲ್ಲಿ ದೀಕ್ಷಾಸ್ನಾನದಲ್ಲಿ ಸಮಾಧಿಮಾಡಲ್ಪಟ್ಟು ಅದರೊಳಗಿಂದ ನೂತನ ಜೀವದೊಂದಿಗೆ ಜನ್ಮಿಸುವನು. ಅಂದರೆ "ಕ್ರಿಸ್ತಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು"(ರೋಮಾ6:3–4).

"ಹೀಗಿರಲಾಗಿ ಯಾವನಾದರು ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು"(2ಕೋರಿಂಥ5:17).

"ಸುನ್ನತಿ ಯಾಗುವುದರಲ್ಲಿ ಏನೂ ಇಲ್ಲ; ಹೊಸ ಸೃಷಿಯೇ ಬೇಕು "(ಗಲತ್ಯ6:15).

ಪುನರುತ್ಥಾನ(ನೂತನ ಸೃಷ್ಟಿಯೆಂದರೆ ಆತ್ಮೀಯ ಮನುಷ್ಯನು)

"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ. ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡೆಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು."(ಎಫಸ2:8–10).

"ಯೇಸುವಿನಲ್ಲಿರುವ ಸತ್ಯೋಪದೇಶವು ಯಾವುದೆಂದರೆ–ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು ತೆಗೆದು ಹಾಕಿಬಿಡಬೇಕು ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟುಹೋಗುವಂಥದ್ದು. ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ."(ಎಫಸ4:22–24).

"ನಾನು ಹೇಳುವುದೇನೆಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರ ಭಾವದ ಅಭಿಲಾಷೆಗಳನ್ನು ಎಷ್ಟೂ ಮಾತ್ರಕ್ಕೂ ನೆರವೇರಿಸುವುದಿಲ್ಲ. ಯಾಕೆಂದರೆ ಶರೀರಭಾವವು ಅಭಿಲಾಶಿಸುವುದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವುದು ಶರೀರಭಾವಕ್ಕೆ ವಿರುದ್ಧವಾಗಿದೆ"(ಎಫಸ5:16–17).

“ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನೂ ಕರ್ತನಿಗೆ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ”(ಕೊಲೆಸ್ಸೆ3:17).

“ಆದರೆ ದೇವರಾತ್ಮನಿಂದ ಉಂಟಾದ ಫಲವೇನೆಂದರೆ ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಪೇಕ್ಷಿಸುವುದಿಲ್ಲ. ಕ್ರಿಸ್ತಯೇಸುವಿನವರು ತಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು. ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನ ಅನುಸರಿಸಿ ನಡೆಯೋಣ. ಅಹಂಕಾರಿಗಳೂ ಒಬ್ಬರನ್ನೊಬ್ಬರು ಕೆಣಕುವವರೂ ಒಬ್ಬರ ಮೇಲೊಬ್ಬರು ಮತ್ಸರವುಳ್ಳವರೂ ಆಗದೆ ಇರೋಣ”(ಗಲತ್ಯ5:22–26).

## ದೈನಂದಿನ ಜೀವಿತ:

“ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು ನಿಮ್ಮನ್ನು ಪ್ರಬೋಧಿಸುತ್ತೇನೆ ದೀರ್ಘಶಾಂತಿಯಿಂದಲೂ ಕೊಡುದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಆಸಕ್ತರಾಗಿರಿ”(ಎಫಸ4:1–3).

“ಆದದರಿಂದ ಅನ್ಯಜರು ನಡೆದುಕೊಳ್ಳುವ ಪ್ರಕಾರ ನೀವು ಇನ್ನು ಮೇಲೆ ನಡೆದುಕೊಳ್ಳಬಾರದೆಂದು  ಕರ್ತನಲ್ಲಿರುವವನಾಗಿ ನಿಮಗೆ ಖಂಡಿತವಾಗಿ ಹೇಳುತ್ತೆನೆ. ಅವರು ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ ನಡೆದುಕೊಳ್ಳುತ್ತಾರೆ; ಅವರ ಮನಸ್ಸು ಮೊಬ್ಬಾಗಿ ಹೋಗಿದೆ, ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದರೆ. ಅವರು ತಮ್ಮ ದುಸ್ಥಿತಿಗಾಗಿ ಸ್ವಲ್ಪವೂ ಚಿಂತಿಸದೆ ತಮ್ಮನ್ನು ಬಂಡುತನಕ್ಕೆ ಒಪ್ಪಿಸಿಕೊಟ್ಟು ಎಲ್ಲಾವಿಧವಾದ ಅಶುದ್ಧ ಕೃತ್ಯಗಳನ್ನು ಅತ್ಯಾಶೆಯಿಂದ ನಡಿಸುವವರಾಗಿದ್ದಾರೆ”(ಎಫೆಸ4:17–19).

ನೂತನ ಸೃಷ್ಟಿಯಿಂದ ಅನುದಿನವೂ ಜೀವಿಸುವುದಕ್ಕೆ ಎಫಸ4,5 ಮತ್ತು 6ರಲ್ಲಿ ತಿಳಿಯಪಡಿಸಿರುವ ಲೇಖನೆಯಲ್ಲಿನ ಸಂಗತಿಗಳನ್ನು ಗಮನಿಸಿ:

- ನಿನ್ನ ಮನಸ್ಸಿನಲ್ಲಿ ಹೊಸತನವನ್ನು ಹೊಂದಿದವನಾಗಿರು.
- ಪೂರ್ವ ಸ್ವಭಾವವನ್ನು ತೆಗೆದು ನೆರೆಯವನ ಸಂಗಡ ಸತ್ಯವನ್ನೇ ಆಡಲಿ.

- ಕೋಪಮಾಡಬೇಕಾದರೋ ಪಾಪ ಮಾಡಬೇಡಿರಿ.
- ಸೂರ್ಯನು ಮುಳುಗುವುದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ.
- ಕಳವು ಮಾಡುವವನು ಇನ್ನು ಮೇಲೆ ಕಳವು ಮಾಡದೆ ಕೈಯಿಂದ ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ.
- ನಿಮ್ಮ ಬಾಯೊಳಗಿಂದ ಯಾವ ಕೆಟ್ಟಮಾತೂ ಹೊರಡಬಾರದು.
- ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ. ಇವುಗಳನ್ನೂ ಸಕಲವಿಧವಾದ ಕೆಟ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ.
- ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರಿ.
- ದೇವರು ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ ಹಾಗೆ ನೀವು ಕ್ಷಮಿಸುವವರಾಗಿರಿ.
- ಪ್ರೀತಿಯಲ್ಲಿ ನಡೆದುಕೊಳ್ಳಿರಿ.
- ಜಾರರು ದುರಾಚಾರಿಗಳು ವಿಗ್ರಹಾರಾಧಿಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲ.
- ಮದ್ಯ ಪಾನ ಮಾಡಿ ಮತ್ತರಾಗ ಬೇಡಿರಿ
- ಕೀರ್ತನೆಗಳಿಂದಲೂ ಆತ್ಮಸಂಭಂದವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಒಬ್ಬರಿಗೊಬ್ಬರು ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಡುತ್ತಾ ಯವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ.
- ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರಿ.
- ಪುರುಷರೇ,ಕ್ರಿಸತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ.
- ಮಕ್ಕಳೇ, ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆ ತಾಯಿಗಳ ಮಾತನ್ನು ಕೇಳಬೇಕು.
- ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು.

• ದಾಸತ್ವದಲ್ಲಿರುವವರೇ, ಈ ಲೋಕದಲ್ಲಿ ನಿಮಗೆ ಯಜಮಾನನಿರುವವರಿಗೆ ಕ್ರಿಸ್ತನಿಗೆಂದು ಮನೋಭೀತಿಯಿಂದ ನಡುಗುವವರಗಿಯೂ ಸರಳ ಹೃದಯರಗಿಯೂ ವಿಧೇಯರಾಗಿರ್ರಿ.

• ಯಜಮಾನರೆ, ನಿಮ್ಮ ಕೈಕೆಳಗಿರುವ ದಾಸರ ವಿಷಯದಲ್ಲಿ ಅದೇ ರೀತಿ ನಡೆಯಿರಿ.ಪರಲೋಕದಲ್ಲಿ ನಿಮಗೂ ಅವರಿಗೂ ಯಜಮಾನ ನಾಗಿರುವಾತನು ಇದ್ದಾನೆಂತಲೂ ಆತನಲ್ಲಿ ಪಕ್ಷಪಾತವಿಲ್ಲವೆಂತಲೂ ತಿಳಿದು ನಿಮ್ಮ ದಾಸರನ್ನು ಬೆದರಿಸುವ ಪದ್ಧತಿಯನ್ನು ಬಿಟ್ಟು ಬಿಡಿರಿ.

• "ಅಧಿಪತಿಗಳಿಗೂ ಅಧಿಕಾರಿಗಳಿಗೂ ಅಧೀನರಾಗಿ ವಿಧೇಯರಾಗಿರಬೇಕೆಂತಲೂ ಸಕಲ ಸತ್ಕಾರ್ಯಗಳನ್ನು ಮಾಡುವುದಕ್ಕೆ ಸಿದ್ಧರಾಗಿರಬೇಕೆಂತಲೂ ಯಾರನ್ನೂ ದೂಷಿಸದೆ ಕುರ್ತಕಮಾಡದೆ ಎಲ್ಲಾ ಮನುಷ್ಯರಿಗೆ ಪರಿಪೂರ್ಣ ಸಾಧುಗುಣವನ್ನು ತೋರಿಸುತ್ತಾ ಸಾತ್ವಿಕರಾಗಿರಬೇಕೆಂತಲೂ ಅವರಿಗೆ ಜ್ಞಾಪಕಕೊಡು"(ತೀತ3:1–2).

ಪ್ರಶ್ನೆಗಳು:

1.ಕ್ರಿಸ್ತನ ಬಳಿಗೆ ಬಂದ ಒಬ್ಬ ವ್ಯಕ್ತಿ ನೂತನ ಸೃಷ್ಟಿಯಾಗಿ ಬದಲಾಗುವನು ಯಾಕೆಂದರೆ

a.ದೇವರು ಅದ್ಭುತವಾಗಿ ಒಬ್ಬನ ಜೀವನವನ್ನು ಮಾರ್ಪಡಿಸುವನು

b.ಮನುಷ್ಯನು ತನ್ನಷ್ಟಕ್ಕೆ ತಾನೆ ಒಂದು ಒಳ್ಳೆ ವ್ಯಕ್ತಿಯಾಗಿ ಬದಲಾಗುವನು

c.ದೀಕ್ಷಾಸ್ನಾನದ ಮುಖಾಂತರ ಪಾಪಗಳನ್ನು ತೊಳೆದುಕೊಳ್ಳುವನು

2.ದೇವರ ಕೃಪೆ, ಕ್ರಿಸ್ತನು ಪಾಪಗಳಿಗೋಸ್ಕರ ಪರಿಪೂರ್ಣ ಬಲಿ, ಎಲ್ಲರಿಗೂ ಉಚಿತವಾಗಿ ಅನುಗ್ರಹಿಸಲಾಗಿದೆ ಆದರೆ ಅದನ್ನು ಅಂಗೀಕರಿಸುವುದಕ್ಕೆ ಅಥವಾ ತಿರಸ್ಕರಿಸುವುದಕ್ಕೆ ಸ್ವೇಚ್ಛೆಇಂದ ತನ್ನಲಿರುವ ನಂಬಿಕೆ ಮೇಲೆ ಆಧಾರ ಮಾಗಿದೆ.

a.ಸರಿ b.ತಪ್ಪು

3.ಒಬ್ಬ ವ್ಯಕ್ತಿ ಸತ್ಯವಾದದ್ದನ್ನು,ಪರಿಪೂರ್ಣವಾದದ್ದನ್ನು ಮತ್ತು ನ್ಯಾಯವಾದವುಗಳನ್ನು ಸಹಜವಗಿ ಕಳೆದಿಕೊಳ್ಳಬಹುದು.

a.ಸರಿ b.ತಪ್ಪು

4.ಒಬ್ಬ ನೂತನವಾಗಿ ಕ್ರೈಸ್ತವನಾದವನು ಪಾಪದಲ್ಲಿ ಮರಣಿಸಿ ಸಮಾಧಿಮಾಡಲ್ಪಟ್ಟು ನೂತನ ಜೀವಿತದಲ್ಲಿ ಹೊಸ ಸೃಷ್ಟಿಯಾಗಿ ಎಬ್ಬಿಸಲ್ಪಟ್ಟ ನಂತರ ಮೊದಲಿನಂತೆಯೇ ಜೀವಿಸುವನು.

**a.**ಸರಿ **b.**ತಪ್ಪು

5.ಅವರು?

**a.**ಸರಿ **b.**ತಪ್ಪು

***

## ಪಾಠ– 23

## ಕ್ರಿಸ್ತನಲ್ಲಿರುವುದರಿಂದ ಪ್ರಯೋಜನಗಳು

ದೇವರಿಗೆ ತಿರಿಗಿ ಬೀಳುವ ಸ್ಥಿತಿಯಿಂದ ಶ್ರಮೆಗಳಲ್ಲಿ ನೀತಿವಂತರಾಗಿ ಬದಲಾಗುವ ಸ್ಥಿತಿಯೊಳಗೆ ನಾವು ಬದಲಾಗುವುದಕ್ಕೆ ಅವಶ್ಯಕವಾದ ಸಂಗತಿಗಳನ್ನು ಹಿಂದಿನ ಪಾಠದಲ್ಲಿ ಹೇಳಲಾಗಿದೆ. ಕ್ರಿಸ್ತನ ಮರಣ ಸಮಾಧಿ ಪುನರುತ್ಥಾನ ಸುವಾರ್ತೆಯನ್ನು ನಾವು ನಂಬಬೇಕು ಆತನಲ್ಲಿರುವುದಕ್ಕೆ, ಆತನಲ್ಲಿ ಅಥವಾ ಆತನ ಮೂಲಕ ಬಿಡಿಗಡೆ ಹೊಂದಿ ದೇವರೊಂದಿಗೆ ಸಮಾಧಾನ ಹೊಂದುವುದಕ್ಕೆ ಆ ಸುವಾರ್ತೆ ಸಂದೇಶಕ್ಕೆ ನಾವು ಒಳಗಾಗಬೇಕು.

"ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ ದಯಾ ಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು. ಈ ಕೃಪಾದಾನವು ಆತನ ಪ್ರೀತಿಯಲ್ಲಿಯೇ ನಮಗೆ ದೊರೆಯಿತು. ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ. ಆತನು ರಹಸ್ಯವಾದ ತನ್ನ  ಸಂಕಲ್ಪವನ್ನು ನಮಗೆ ತಿಳಿಯಪಡಿಸುವುದರ ಮೂಲಕ ವಿಶೇಷವಾದ ಜ್ಞಾನವನ್ನೂ ಬುದ್ಧಿಯನ್ನೂ ಕೊಟ್ಟು  ಆ ಕೃಪೆಯನ್ನು  ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ"(ಎಫೆಸ1:4–10).ಆದ್ದರಿಂದ ಕ್ರಿಸ್ತನ ಮೂಲಕ ದೇವರೊಂದಿಗೆ ಸಮಾಧಾನ ಹೊಂದಬಹುದು.

"ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ; ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತೆಂದು ನಿಶ್ಚಯಿಸಿಕೊಂಡೆವು. ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ ಜೀವಿಸಬೇಕಂತಲೇ ಆತನು ಎಲ್ಲರಿಗೋಸ್ಕರ ಸತ್ತನು. ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ ಶರೀರಸಂಭಂದವಾಗಿ ಅರಿತುಕೊಳ್ಳುವುದಿಲ್ಲ; ಕ್ರಿಸ್ತನನ್ನು ಕೂಡ ನಾವು ಶರೀರಸಂಭದವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳಿದುಕೊಳ್ಳುವುದಿಲ್ಲ. ಹೀಗಿರಲಾಗಿ ಯಾವನಾದರು ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಹೋಗಿ ಎಲ್ಲಾ ನೂತನವಾಯಿತು. ಇದೆಲ್ಲಾ ದೇವರಿಂದಲೇ ಉಂಟಾದದ್ದು. ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನ

ಪಡಿಸಿಕೊಂಡು ಸಮಾಧಾನ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ; ಆ ಸಮಾಧಾನ ವಾಕ್ಯವೇನೆಂದರೆ ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದಾನೆಂಬದೇ. ಅದನ್ನು ಸಾರುವ ಸೇವೆಗೆ ನಮ್ಮನ್ನು ನೇಮಿಸಿದ್ದಾನೆ"(2ಕೊರಿಂಥ5:14–19).

"ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೆಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿ ಹೊಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸದೃಸ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶ್ಯವಾದ ಪುನರುತ್ಥನಾವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೊಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆಹೊಂದಿದ್ದಾನಷ್ಟೆ"(ರೋಮಾ6:1–7).

"ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕ ಬಾಲಬೋಧನೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸಕರವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರಿ. 'ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆ'ಯು ಅವತರಿಸಿ ವಾಸಮಾಡುತ್ತದೆ ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ. ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಿಗಳಿಗೂ ಶಿರಸ್ಸು. ನೀವು ಆತನಲ್ಲಿ ಸುನ್ನತಿಯನ್ನು ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ. ಇದು ಪಾಪಾಧೀನಸ್ವಭಾವನ್ನು ವಿರ್ಸಜಿಸುವುದೇ; ಇದೇ ಕ್ರಿಸೀಯ ಸುನ್ನತಿ; ನೀವು ದೀಕ್ಷಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೊಣಲ್ಪಟ್ಟಿದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ"(ಕೊಲೊಸ್ಸೆ2:8–12).

ನಾವು ದೇವರೊಂದಿಗೆ ಕ್ರಿಸ್ತನ ಮುಖಾಂತರ ಸಮಾಧಾನ ಹೊಂದುವುದಾದರೆ ನಾವು ದೇವರ ಮುಂದೆ ನಿಂತುಕೊಂಡಾಗ ಆತನು(ಯೇಸುಕ್ರಿಸ್ತನು) ನಮ್ಮ ಪಕ್ಷದಲ್ಲಿ ನ್ಯಾಯಾಧಿಪತಿಯಾಗಿ ನಿಂತುಕೊಳ್ಳುವನು.

ಪ್ರಶ್ನೆಗಳು:

1.ಒಬ್ಬನು ತನ್ನ ಪೂರ್ವ ಸ್ವಭಾವವನ್ನುಕ್ರಿಸ್ತನಲ್ಲಿ ಶಿಲುಬೆಗೆ ಹಾಕಿದಾಗ ಆತನು ಪಾಪದ ಮರಣದಲ್ಲಿ ಕ್ರಿಸ್ತನಲ್ಲಿ ಸೇರಿ ನಿತ್ಯಜೀವ ವಾಗ್ದಾನವನ್ನು ಹೊಂದಿ ಆತನ ಪುನರುತ್ಥಾನದಲ್ಲಿ ಐಕ್ಯವಾಗುತ್ತಿದ್ದೇವೆ.

**a.**ಸರಿ **b.**ತಪ್ಪು

2.ಬಿಡುಗಡೆಯನ್ನು ಎಲ್ಲಿ ಕಂಡುಕೊಳ್ಳಬಹುದು?

**a.**ಕ್ರಿಸ್ತನಲ್ಲಿ ನಂಬಿಕೆಯನ್ನಿರಿಸುವುದರ ಮುಖಾಂತರ

**b.**ಬಿಡುಗಡೆಗೋಸ್ಕರ ಪ್ರಾರ್ಥನೆಮಾಡಿ ಕೇಳಿಕೊಳ್ಳುವುದು

**c.**ಕ್ರಿಸ್ತನ ರಕ್ತದಲ್ಲಿ ಮಾತ್ರ

3.ನಾವು ಕ್ರಿಸ್ತನಲ್ಲಿರುವುದರಿಂದ ಪ್ರಯೋಜನವೇನು?

**a.**ಪಾಪ ಕ್ಷಮಾಪಣೆ ಉಂಡಾಗುತ್ತದೆ.

**b.**ನಿತ್ಯಜೀವ ಉಂಟಾಗುತ್ತದೆ

**c.**ಆಶೀರ್ವಾದ ಉಂಟಾಗುತ್ತದೆ

**d.**ಮೇಲಿನ ಎಲ್ಲವೂ

4.ಪಾಪದಲ್ಲಿ ಮರಣಿಸಿ, ದೀಕ್ಷಾಸ್ನಾನದಲ್ಲಿ ಸಮಾಧಿ ಮಾಡಲ್ಪಟ್ಟು ಮತ್ತು ಒಂದು ನೂತನ ಜೀವವನ್ನು ಹೊಂದುವುದಕ್ಕೆ ಎಬ್ಬಿಸಲ್ಪಟ್ಟವರು ಕ್ರಿಸ್ತನಲ್ಲಿ ಐಕ್ಯವುಳ್ಳವರಾಗಿದ್ದಾರೆ.

**a.**ಸರಿ **b.**ತಪ್ಪು

5.ಸರ್ವ ಸಂಪೂರ್ಣತೆ ಎಲ್ಲಿ ಇದೆ?

**a.**ಕ್ರಿಸ್ತನಲ್ಲಿ

**b.**ಅಪೊಸ್ತಲರಲ್ಲಿ

**c.**ಯಾರೂ ಅಲ್ಲ

***

## ಪಾಠ–24

## ದುರಾಶೆಗಳಿಂದ ಸೆಳೆಯಲ್ಪಡುವುದು

ನಮ್ಮಂಬುವವರಿಗೆ ದೇವರ ಬಲಸ್ವರೂಪವಾಗಿದೆ ಎಂದು ಸುವಾರ್ತೆಯನ್ನು ಕುರಿತು ಪೌಲನು ರೋಮಾಪುರದವರಿಗೆ ಹೇಳಿದನು.(ರೋಮಾ1:16)ದೇವರ ವಾಕ್ಯವನ್ನು ಓದಿ ಅರ್ಥಮಾಡಿಕೊಳ್ಳುವುದರಿಂದ ಅಥವಾ ಕೇಳುವುದರಿಂದ ವಿಶ್ವಾಸ ಉಂಟಾಗುತ್ತದೆ(10:17) ನಾವು ದೇವರ ವಾಕ್ಯಕ್ಕೆ ಒಳಗಾದಾಗ, ಪಾಪಮಾಡುವುದರ ವಿಷಯದಲ್ಲಿ ಸತ್ತಿದ್ದೇವೆ. "ಪಾಪದ ಪಾಲಿಗೆ ಸತ್ತವರಾದ ನಾವು ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿ ಹೊಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸದೃಸ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶ್ಯವಾದ ಪುನರುತ್ಥನಾವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೊಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆಹೊಂದಿದ್ದಾನಷ್ಟೆ"(ರೋಮಾ6:1–7).

### ಬಿತ್ತುವ ಶಾಸ್ತ್ರ ಕುರಿತು ಒಂದು ಕಥೆ ಇದು:

ಒಂದು ಬೀಜವು ದೊಡ್ಡ ವೃಕ್ಷವಾಗಿ ಬೆಳೆಯಬೇಕಾದರೆ ಅದು ಬಿತ್ತಬೇಕು ನಂತರ ಮೊಳಕೆ ಬರಬೇಕು ಮೊಳಕೆ ಬೆಳೆದ ನಂತರ ಅದು ದೊಡ್ಡಮರವಾಗಿ ಬೆಳೆಯುವ ಸಂದರ್ಭದಲ್ಲಿ ಅದಕ್ಕೆ ಅನೇಕ ಕಷ್ಟಗಳು ಎದುರಾಗುವವು ಉದಾಹರಣೆಗೆ ಗಾಳಿ ಮಳೆ ಬರಗಾಲ ಅಗ್ನಿ ಮುಂತಾದವುಗಳು ಕೀಟಗಳು ಪಕ್ಷಿಗಳು ಪ್ರಾಣಿಗಳು ಮತ್ತು ಮನುಷ್ಯರಿಂದ ಎದುರಾಗುವ ಕಷ್ಟಗಳಿಂದ ಕೆಲವು ಮರಗಳಿಗೆ ಪೆಟ್ಟುಬೀಳಬಹುದು, ನಿಂತು ಹೋಗಬಹುದು, ಕೆಲವು ಮುರಿದು ಹೋಗಬಹುದು ಅಥವಾ ಬೆಳವಣಿಗೆ ಇಲ್ಲದೆ ಕುಂದಿಹೋಗಬಹುದು ಮತ್ತು ಕೆಲವು ಸತ್ತು ಒಣಗಿಹೋಗಬಹುದು ಮರಗಳಂತೆ ದುಃಖಕರವಾದ ಕಷ್ಟಗಳು ಕ್ರೈಸ್ತರಿಗೆ ಬರಬಹುದು ಅವುಗಳಿಂದ ಅವರು ಸಹ ಬೆಳೆಯಬಹುದು, ಬಿದ್ದುಹೋಗಬಹುದು ಅಥವಾ ತುಳಿದುಹಾಕಲ್ಪಡಬಹುದು ನಿಂತುಹೋಗದಂತೆ ಕೆಳಗಿನ ವಚನಗಳಲ್ಲಿ ಹೇಳಿದಂತೆ ಸಾವು ಉಂಟಾಗಬಹುದು.

“ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವುದಕ್ಕೆ ಸಿದ್ಧವಾಗಿರುವ ರಕ್ಷಣೆಯು ನಂಬುವವರಾದ ನಿಮಗೆ ದೊರೆಯಬೇಕೆಂದು ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ. ನೀವು ಸದ್ಯಕ್ಕೆ ಸ್ವಲ್ಪಕಾಲ ದೇವರಚಿತ್ತಾನುಸಾರ ನಾನಾ ಕಷ್ಟಗಳಲ್ಲಿದ್ದು ದುಃಖಿಸುವವರಾಗಿದ್ದರೂ ಆ ಪದವಿಯನ್ನು ಆಲೋಚಿಸಿ ಹರ್ಷಿಸಿಸುವವರಾಗಿದ್ದೀರಿ. ಬಂಗಾರವು ನಾಷನವಾಗುವಂಥದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟಹಾಕಿ ಶೋಧಿಸುವುದುಂಟಷ್ಟೆ. ಬಂಗಾರಕ್ಕಿಂತ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷ್ನಾನಾಗುವಾಗ ನಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟುಮಾಡುವುದು. ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ. ನೀವು ಈಗ ಆತನನ್ನು ಕಾಣದಿದ್ದರೂ ಆತನಲ್ಲಿ ನಂಬಿಕೆಯಿಟ್ಟು ನಿಮ್ಮ ನಂಬಿಕೆಯ ಅಂತ್ಯಫಲವಾಗಿರುವ ಆತ್ಮರಕ್ಷಣೆಯನ್ನು ಹೊಂದುವವರಾಗಿ ಹೇಳಲಶಕ್ಯವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ. ದೇವರು ನಿಮಗೆ ತೋರಿಸುವ ಕೃಪೆಯನ್ನು ಕುರಿತು ಮುಂತಿಳಿಸಿದ ಪ್ರವಾದಿಗಳು ಈ ರಕ್ಷಣೆ ವಿಷಯದಲ್ಲಿ ಸೂಕ್ಷ್ಮವಾಗಿ ವಿಚಾರಿಸಿ ಪರಿಶೋಧನೆ ಮಾಡಿದರು.”**(1ಪೇತ್ರ1:5–10).**

“ಇದಲ್ಲದೆ ನೀವು ಹಿಂದಿನಕಾಲದಲ್ಲಿ ಅನ್ಯರು, ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷಮನಸುಳ್ಳವರೂ ಆಗಿದ್ದರೂ ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೋಲದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನ ಪಡಿಸಿಕೊಂಡಿದ್ದಾನೆ ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ. ನೀವು ಕೇಳಿದಂತ ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ ಅಸ್ತಿವಾರದ ಮೇಲೆ ನಿಂತು ಸ್ತಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವುದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವುದು.”**(ಕೊಲೊಸ್ಸಿ1:21–23).**

“ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನು ಪ್ರಾಪಂಚಿಕ ಬಾಲಬೋಧನೆಯನ್ನು ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು”**(ಕೊಲೊಸ್ಸಿ2:8).**

“ಅತೀ ವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ. ನಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ, ಮತ್ತು ಪ್ರಾಪಂಚಿಕ ಬುದ್ಧಿಯಿಂದ ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ, ಆದರೆ ಕ್ರೀಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ. ಇಂಥವರು ನಿಮಗೆ ದೊರೆಕಿರುವ ಬಿರುದನ್ನು ಅಪಹರಿಸುವುದಕ್ಕೆ ಅವಕಾಶಕೊಡಬೇಡಿರಿ. ಆ ಶಿರಸ್ಸಿನಿಂದಲೇ ದೇಹವೆಲ್ಲಾ ಕೀಲು ನರಗಳಮೂಲಕ ಬೇಕಾದ ಸಹಾಯವನ್ನು ಹೊಂದಿ ಒಂದಾಗಿ ಕೂಡಿಸಲ್ಪಟ್ಟು ದೇವರು ಕೊಡುವ ವೃದ್ಧಿಯಿಂದ ಅಬಿವೃದ್ಧಿಯಾಗುತ್ತಾ ಬರುತ್ತದೆ.”**(ಕೊಲೊಸ್ಸಿ2:18–19).**

“ನೀವು ದೇವರ ಕೃಪೆಯನ್ನು ಕುರಿತು ಸತ್ಯಾರ್ಥವನ್ನು ಕೇಳಿ ತಿಳುಕೊಂಡ ದಿವಸದಿಂದ ಆ ಸುವಾರ್ತೆಯು ನಿಮ್ಮಲ್ಲಿ ಫಲಕೊಟ್ಟು ವೃದ್ಧಿಯಾಗುತ್ತಾ ಬಂದ ಪ್ರಕಾರ ಲೋಕದಲ್ಲೆಲ್ಲಾ ಹಬ್ಬಿ ಫಲಕೊಟ್ಟು ವೃದ್ಧಿಯಾಗುತ್ತಾ ಬರುತ್ತದೆ. ನಮ್ಮ ಪ್ರಿಯ ಜೊತೆಯ ದಾಸರಾದ ಎಪಪ್ರನಿಂದ ಆ ಸತ್ಯೋಪದೇಶವನ್ನು ಕಲಿತುಕೊಂಡಿರಿ. ಅವರು ನಿಮಗೋಸ್ಕರ ಕ್ರೀಸ್ತನ ನಂಬಿಗಸ್ತನಾದ ಸೇವಕರು”(ಕೊಲೊಸ್ಸಿ1:6–7).

“ನಂಬಿಕೆಯನ್ನೂ ಒಳ್ಳೇ ಮನಸ್ಸಾಕ್ಷಿಯನ್ನೂ ಬಿಡದೆ ಹಿಡಿಕೋ ಕೆಲವರು ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿಬಿಟ್ಟು ಕ್ರಿಸ್ತನ ನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟಪಟ್ಟವರಂತೆ ಇದ್ದಾರೆ; ಇವರು ದೇವ ದೂಷಣೆಮಾಡಬಾರದೆಂಬುದನ್ನೂ ಕಲಿತು ಕೊಳ್ಳುವಂತೆ ಇವರನ್ನು ಸೈತಾನನಿಗೆ ಒಪ್ಪಿಸಿಕೊಟ್ಟನು”(1ತಿಮೋತಿ1:19–20).

“ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನಿಡಿಗಳಿಗೂ ದೈವಗಳ ಬೋಧನೆಗಳಿಗೂ ಲಕ್ಷಕೊಟ್ಟು ಕ್ರೀಸ್ತನ ನಂಬಿಕೆಯಿಂದ ಬ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತನೆ. ಸುಳ್ಳು ಬೋಧಕರು ಬಂದು ಸ್ವಂತ ಮನಸ್ಸಿನಲ್ಲಿ ಅಪರಾಧಿಗಳೆಂಬ ಬರೆಯುಳ್ಳ ವರಾದರೂ ತಾವು ನೀತಿವಂತರೆಂದು ತೋರ್ಪಡಿಸಿಕೊಂಡು ಅವರನ್ನು ಮರಳುಗೊಳಿಸಿ ಮದುವೆಯಾಗಬಾರದೆಂತಲೂ ಇಂಥಿಥ ಆಹಾರವನ್ನು ತಿನ್ನಬಾರದೆಂತಲೂ ಹೇಳುವರು. ಆದರೆ ಯಾರು ನಂಬುವವರಾಗಿದ್ದು ಸತ್ಯವನ್ನು ಗ್ರಹಿಸಿದ್ದಾರೋ ಅವರು ಕೃತಜ್ಞತಾಸ್ತುತಿಮಾಡಿ ತಿನ್ನುವುದಕ್ಕೋಸ್ಕರ ದೇವರು ಸಕಲ ವಿಧವಾದ ಆಹಾರವನ್ನು ಉಂಟುಮಾಡಿದನು”(1ತಿಮೋತಿ4:1–3).

“ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರೀಸ್ತ ನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ”(1ತಿಮೋಥಿ 6:10).

“ಎಲೈ, ತಿಮೋಥಯನೇ ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಭದಪಟ್ಟ ಪ್ರಾಪಂಚಿಕವಾದ ಆ ಹರಟೆ ಮಾತುಗಳಿಗೂ ವಿವಾದಗಳಿಗೂ ನೀನು ದೋರವಾಗಿದ್ದು ನಿನ್ನ ವಶಕ್ಕೆ ಕೊಟ್ಟಿರುವುದನ್ನೇ ಕಾಪಾಡು, ಕೆಲವರು ಆ ಸುಳ್ಳಾದ ಜ್ಞಾನವನ್ನು ಅವಲಂಬಿಸಿ ಕ್ರಿಸ್ತನಂಬಿಕೆಯಿಂದ ಬ್ರಷ್ಟರಾದರು. ಕೃಪೆಯು ನಿಂಮ್ಮೊಂದಿಗಿ ಇರಲಿ. 1ತಿಮೋಥಿ(6:20–21).

“ಪ್ರಾಪಂಚಿಕವಾದ ಹರಟೆ ಮಾತುಗಳಿಗೆ ದೂರವಾಗಿರು; ಅವುಗಳಿಗೆ ಮನಸ್ಸುಕೊಡುವವರು ಹೆಚ್ಚೆಚ್ಚಾಗಿ ಭಕ್ತಿ ಹೀನರಾಗುವರು. ಅವರ ಮಾತು ಕೊಳಕು ಹಣ್ಣಿನಂತೆ ಹರಡಿಕೊಳ್ಳುವುದು ಅವರಲ್ಲಿ ಹುಮೆನಾಯನೂ ಫಿಲೇತನೂ ಇದ್ದಾರೆ; ಅವರು ಪುನರುತ್ತಾನವು

ಹಾಗಿಹೋಯಿತೆಂದು ಹೇಳುತ್ತಾ ಸತ್ಯಬ್ರಷ್ಟರಾಗಿ ಕೆಲವರ ನಂಬಿಕೆಯನ್ನು ಕೆಡಿಸುವವರಾಗಿದ್ದಾರೆ."(2ತಿಮೋಥಿ2:16–18).

"ಯಾಕೆಂದರೆ ದೇಮನು ಇಹಲೋಕವನ್ನು ಪ್ರೀತಿಸಿ ನನ್ನನ್ನು ಬಿಟ್ಟು ಥೆಸಲೋನಿಕಕ್ಕೆ ಹೋದನು: ಕ್ರೇಸ್ತನು ಗಲಾತ್ಯಕ್ಕೂ ತೀತನು ದಲ್ಮಾತಕ್ಕೂ ಹೋದರು; ಲೂಕನು ಮಾತ್ರ ನನ್ನ ಜೊತೆಯಲ್ಲಿದ್ದಾನೆ"(2ತಿಮೋಥಿ4:10).

"ಅನೇಕರು ಬರೀ ಮಾತಿನವರಾಗಿಯೂ ಮೋಸಗಾರರಾಗಿಯೂ ಇದ್ದು ಅಧಿಕಾರಕ್ಕೆ ಒಳಗಾಗದರಾಗಿದ್ದಾರೆ; ಅವರೊಳಗೆ ಹೆಚ್ಚು ಜನರು ಸುನ್ನತಿಯವರು. ಅವರು ನೀಚಲಾಭವನ್ನು ಹೊಂದುವುದಕ್ಕಾಗಿ ಮಾಡಬಾರದ ಉಪದೇಶವನ್ನು ಮಾಡಿ ಕುಟುಂಬ ಕುಟುಂಬಗಳನ್ನೇ ಹಾಳು ಮಾಡುತ್ತಾರಾದದರಿಂದ ಅವರ ಬಾಯಿ ಮುಚ್ಚಿಸ ಬೇಕಾಗಿದೆ"(ತೀತ1:10–11).

"ಕ್ರೇಸ್ತನ ಕೃಪೆಯಿಂದ ನಿಮ್ಮನ್ನು ಕರೆದಾತನನ್ನು ನೀವು ಇಷ್ಟು ಬೇಗನೆ ಬಿಟ್ಟು ಬೇರೆ ಸುವಾರ್ತೆಯನ್ನು ಹಿಡಿದಿರುವುದಕ್ಕೆ ಆಶ್ಚರ್ಯಪಡುತ್ತೇನೆ"(ಗಲಾತ್ಯ1:6).

"ಆದರೆ ನಾವು ಕ್ರಿಸ್ತನ ಆಶ್ರಯದಲ್ಲಿ ನೀತಿವಂತರೆಂಬ ನಿರ್ಣಯ ಹೊಂದುವುದಕ್ಕೆ ಪ್ರಯತ್ನಿಸುತ್ತಿರುವಾಗ ನಾವು ಪಾಪಿಗಳಾಗಿ ತೋರಿಬಂದರೆ ಕ್ರಿಸ್ತನು ಪಾಪಕ್ಕೆ ಸಹಾಯಕನೆಂದು ಹೇಳಬೇಕೇನು? ಎಂದಿಗೋ ಹೇಳಬಾರದು"(ಗಲತ್ಯ2:17).

"ನಾನು ನಿಮಗೋಸ್ಕರ ಪ್ರಯಾಸ ಪಟ್ಟಿದ್ದು ನಿಷ್ಫಲವಾಯಿತೋ ಏನೋ ಎಂದು ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ"(ಗಲತ್ಯ4:11).

"ನೀವು ಸತ್ಯವನ್ನು ಅನುವರ್ತಿಸದಂತೆ ಯಾರು ನಿಮ್ಮನ್ನು ತಡೆದರು?"ಗಲತ್ಯ5:7.

"ನನ್ನ ಸಹೋದರರೇ ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? ಅಂತ ನಂಬಿಕೆಯು ಇವನನ್ನು ರಕ್ಷಿಸುವದೋ?"(ಯಾಕೋಬ2:14).

"ಹಾಗೆಯೇ ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು"(ಯಾಕೋಬ2:17).

"ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನು ಆದುಕೊಂಡದ್ದನ್ನು ದೃಡಪಡಿಸಿಕೊಳ್ಳವದಕ್ಕೆ ಮತ್ತಷ್ಟು ಪ್ರಯಾಸ ಪಡಿರಿ ಹೀಗೆ ನೀವು ಮಾಡಿದರೆ ಎಂದಿಗೋ ಎಡಹುವದಿಲ್ಲ"(2ಪೇತ್ರ1:10).

"ಆದರೆ ಇಸ್ರಾಯೇಲ್ ಜನರಲ್ಲಿ ಸುಳ್ಳು ಪ್ರವಾದಿಗಳು ಎದ್ದರಲ್ಲಾ; ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು. ಅವರು ನಾಶಕರವಾದ ಮತ ಬೇದಗಳನ್ನು

ಕಳ್ಳತನದಿಂದ ಹುಟ್ಟಿಸುವರು ತಮ್ಮನ್ನು ಕೊಂಡುಕೊಂಡ ಒಡಯನನ್ನು ಕೊಡ ತಾವು ಅರಿಯವು ಎಂದು ಹೇಳುವವರಾಗಿ ಫಕ್ಕನೆ ತಮ್ಮ ಮೇಲೆ ನಾಶವನ್ನು ಬರಮಾಡಿಕೊಳ್ಳುವರು"(2ಪೇತ್ರ2:1).

"ಆದಕಾರಣ ಪ್ರಿಯರೇ, ನೀವು ಈ ಸಂಗತಿಗಳನ್ನು ಮುಂದಾಗಿ ತಿಳಿದುಕೊಂಡಿರುವದರಿಂದ ಅಧರ್ಮಿಗಳ ಬ್ರಾಂತಿಯ ಸೆಳವಿಗೆ ಸಿಕ್ಕಿಕೊಂಡು ನಿಮ್ಮ ಸ್ಥಿರ ಮನಸ್ಸನ್ನು ಬಿಟ್ಟು ಬ್ರಷ್ಟರಾಗದಂತೆ ಹೆಚ್ಚರಿಕೆಯಾಗಿರಿ"2ಪೇತ್ರ3:17.

"ಯೇಸು ಕ್ರಿಸ್ತನ ದಾಸನು ಯಾಕೋಬನ ತಮ್ಮನೂ ಆಗಿರುವ ಯೂದನು ತಂದೆಯಾದ ದೇವರಲ್ಲಿ ಪ್ರಿಯರಾದವರೂ ಯೇಸು ಕ್ರಿಸ್ತನಿಗಾಗಿ ಕಾಯಲ್ಪಟ್ಟವರೂ ಆಗಿರುವವರಿಗೆ ಬರೆಯುವುದೇನೆಂದರೆ ದೇವರಿಂದ ಕರೆಯಲ್ಪಟ್ಟ ನಿಮಗೆ ಕರುಣೆಯು ಶಾಂತಿಯೂ ಪ್ರೀತಿಯೂ ಹೆಚ್ಚಾಗಲಿ."(ಯೂದ1–2).

"ನೀವು ಸಮಸ್ತವನ್ನೂ ಮೊದಲೇ ತಿಳಿದವರಾಗಿದ್ದರೂ ನಾನು ಮುಂದಣ ಕೆಲವು ಸಂಗತಿಗಳನ್ನು ನಿಮ್ಮ ಜ್ಞಾಪಕಕ್ಕೆ ತರಬೇಕೆಂದು ಆಪೇಕ್ಷಿಸುತ್ತೇನೆ. ಅವು ಯಾವವೆಂದರೆ –ಕರ್ತನು ತನ್ನ ಪ್ರಜೆಯನ್ನು ಐಗುಪ್ತದೇಶದೊಳಗಿಂದ ಬಿಡಿಸಿದ ತರುವಾಯ ಅವರೊಳಗೆ ನಂಬದೆ ಹೋದವರನ್ನು ನಾಶಮಾಡಿದನು. ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟ ದೇವದೂತರಿಗೆ ದೇವರು ನಿತ್ಯವಾದ ಬೇಡಿಗಳನ್ನು ಹಾಕಿ ಮಹಾದಿನಗಳಲ್ಲಿ ಆಗುವ ದಂಡನೆಯ ತೀರ್ಪಿಗಾಗಿ ಅವರನ್ನು ಕತ್ತಲೆಯೊಳಗೆ ಇಟ್ಟಿದ್ದಾನೆ. ಸೊದೋಮ ಗೋಮೋರ ಪಟ್ಟಣಗಳವರೂ ಆ ದೂತರಂತೆ ನಡೆದುಕೊಂಡು ತಮ್ಮನ್ನು ಜಾರತ್ವಕ್ಕೆ ಒಪ್ಪಿಸಿ ಬಿಟ್ಟು ಸ್ವಭಾವವಿರುದ್ಧವಾದ ಬೋಗವನ್ನನುಸರಿಸಿದ್ದರಿಂದ ಅವರು ನಿತ್ಯವಾದ ಅಗ್ನಿಯಲ್ಲಿ ದಂಡನೆಯನ್ನು ಅನುಭವಿಸುತ್ತಾ[ದುರ್ಮಾರ್ಗಿಗಳಿಗೆ ಆಗುವ ದುರ್ಗತಿಗೆ] ಉದಾಹರಣೆಯಾಗಿ ಇಡಲ್ಪಟ್ಟಿದ್ದಾರೆ"(ಯೂದ5–7).

ಪ್ರಶ್ನೆಗಳು:

1.ಕ್ರಿಸ್ತನಲ್ಲಿ ಪರಿಶುದ್ಧರಾಗಿ ಮತ್ತು ನಿರ್ದೋಷಿಗಳಾಗಿ ಇದ್ದು ವಿಶ್ವಾಸದಲ್ಲಿ ಮುಂದುವರಿಯದಿದ್ದರೆ ಅವರು ಯಾವುದೇ ಕಾರಣಕ್ಕೂ ಪರಿಶುದ್ದರಾಗಿ ನಿರ್ದೋಷಿಗಳಾಗಿ ಆತನ ಮುಂದೆ ನಿಂತುಕೊಳ್ಳುವುದಿಲ್ಲ ಎಂದು ಪೌಲನು ಕೊಲೆಸ್ಸಿಯದವರಿಗೆ ಬರೆದನು.

**a.**ಸರಿ **b.**ತಪ್ಪು

2.ಶಿಷ್ಯನಾದ ದೇಮಾ, ಪೌಲ, ಇವರ ಸಹಾಯಕ ಪೌಲನನ್ನು ಬಿಟ್ಟು ಲೋಕದೊಳಗೆ ಮತ್ತೆ ತಿರಿಗಿ ಹೋದನು.

**a.**ಸರಿ **b.**ತಪ್ಪು

3.ಅವರ ರಕ್ಷಣೆಯನ್ನು ಕಾಪಾಡುವುದಕ್ಕೆ ಅವರು ಜಾಗ್ರತೆಯಾಗಿರಬೇಕೆಂದು ಪೇತ್ರನು ಕ್ರಸ್ತರಿಗೆ ಹೇಳಿದನು.

**a.**ಸರಿ **b.**ತಪ್ಪು

4.ದೇವ ದೂತರು ಸಹ ಬೇರೆ ಮಾಡಲ್ಪಟ್ಟು ತೀರ್ಪಿನದಿನದ ವರೆಗೂ ಕತ್ತಲೆಯ ಬಂಧನದಲ್ಲಿ ಇಡಲ್ಪಟ್ಟಿದ್ದಾರೆ.

**a.**ಸರಿ **b.**ತಪ್ಪು

5.ಹಣದಾಸೆಯಿಂದ ಕೆಲವರು ವಿಶ್ವಾಸದಿಂದ ತೊಲಗಿ ಹೋಗುವರು.

**a.**ಸರಿ **b.**ತಪ್ಪು

***

## ಪಾಠ–25

## ಆತ್ಮೀಯ ವಸ್ತ್ರಗಳನ್ನು ಧರಿಸಿಕೊಳ್ಳುವುದು

ಸುವಾರ್ತೆಯನ್ನು ಕೇಳಿ, ಯೇಸು ದೇವರ ಮಗನೆಂದು ನಂಬಿ ದೀಕ್ಷಾಸ್ನಾನ ಮಾಡಲ್ಪಟ್ಟು ಪಾಪಗಳಿಗೋಸ್ಕರ ಪರಿಪೂರ್ಣ ಬಲಿಯಾದ ಕ್ರಿಸ್ತನ ಶರೀರದಲ್ಲಿ ಅಂದರೆ ಆತನು ಸ್ಥಾಪಿಸಿರುವ ಸಭೆಯಲ್ಲಿ ಸೇರಿಸಲ್ಪಡುವರು. "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ.ಹೇಗೆಂದರೆ ಕ್ರಿಸ್ತನಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ."(ಗಲತ್ಯ3:26–27).

### ನಾವು ಆತನಂತೆ ಬದಲಾಗುವಂತದ್ದು ಎಷ್ಟೊ ಅವಶ್ಯಕ:

ಪವಿತ್ರಾತ್ಮನ ಪ್ರೇರಣೆಯಿಂದ ಅಪೊಸ್ತಲರ ಮೂಲಕ ಬರೆಯಲ್ಪಟ್ಟಿರುವ ಲೇಖನೆಗಳನ್ನು ಗ್ರಂಥದಲ್ಲಿ ನಾವು ಓದಿ ಅವುಗಳನ್ನು ಅರ್ಥ ಮಾಡಿಕೊಂಡು ಕಲಿತುಕೊಳ್ಳಬೇಕು. ನಾವು ಸಭೆಯಾಗಿ ಅಂದರೆ ಪರಿಶುದ್ಧಮಾಡಲ್ಪಟ್ಟ ಅಥವಾ ಪಾಪದಿಂದ ವಿಧೇಯತೆಗೆ ಕರೆಯಲ್ಪಟ್ಟವರು ಅಥವಾ ಸಂಕ್ಷೇಪ್ತವಾಗಿ ಆತನ ಶರೀರದೊಳಗೆ ಕರೆಯಲ್ಪಟ್ಟಿದ್ದೇವೆ. ಅದು ನಾವು ಧರಿಸಿರುವ ಆತ್ಮೀಯ ವಸ್ತ್ರಗಳನ್ನು ಹಿಡಿದು ಇಲ್ಲ ಇರುವ(ಭೌತಿಕವಾದ ವಸ್ತ್ರಗಳು ಅಲ್ಲ ಎಂದರ್ಥ)ವಿಷಯಗಳನ್ನು ಹಿಡಿದು ನಮ್ಮನ್ನು ಆತನ ಶಿಷ್ಯರು ಎಂದು ಗುರ್ತಿಸುತ್ತಾರೆ.

ಯೆಹೊದ್ಯರ ನಾಯಕರು ಕ್ರಿಸ್ತನನ್ನು ಈ ರೀತಿ ಪ್ರಶ್ನಿಸಿದರು "ಗುರುವೇ ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು ಎಂದು ಆತನನ್ನು ಕೇಳಿದಕ್ಕೆ ಆತನು–ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವದೆಂದರೆ–ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಾ ಗ್ರಂಥಕ್ಕೂ ಆಧಾರವಾಗಿವೆ ಎಂದು ಹೇಳಿದನು"(ಮತಾಯ22:36–40). ಯೇಸು ಸಹ ಒಂದು ಹೊಸ ಆಜ್ಞೆಯನ್ನು ಕುರಿತು " ನಾನು ನಿನಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನೆಂದರೆ ನೀನು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ."(ಯೋಹಾನ13:34).

ಮನುಷ್ಯರ ಮೇಲಲ್ಲದೆ ದೇವರ ಮೇಲೆ ಆಧಾರಮಾಡಿಕೊಂಡಿರುವ ಪ್ರೀತಿಯನ್ನುಹೊಂದಿಕೊಂಡ ಜೀವಿತವನ್ನು ಯಾವಾಗಲೂ ಸತ್ಕ್ರಿಯೆ ಮಾಡುವುದಕ್ಕೆ ಪ್ರಯತ್ನಿಸು ಅದು ಅಧಿಕಾರಕ್ಕಿಂತಲೂ ಧನ(ಹಣ)ಕ್ಕಿಂತಲೂ, ಸೇವೆ ಮಾಡುವುದಕ್ಕೆ ಆಸಕ್ತಿಯಿಂದಿರುವುದು ಪೌಲನು ಕೊಲೆಸ್ಸಿ3:12–17(ಓದು)ರಲ್ಲಿ ಒಂದು ಒಳ್ಳೆ ಪಟ್ಟಿಯನ್ನು ಕೊಟ್ಟಿದ್ದಾನೆ.

ಗಲತ್ಯ5:22ರಲ್ಲಿ ಸಹ ಈ ರೀತಿ ಹೇಳಲ್ಪಟ್ಟಿದೆ. "ಆದರೆ ದೇವರಾತ್ಮನಿಂದ ಉಟಾಗುವ ಫಲವೇನೆಂದರೆ ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ".

"ಯೇಸುವಿನಲ್ಲಿರುವ ಸತ್ಯೋಪದೇಶವು ಯಾವುದೆಂದರೆ –ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು ಕಿತ್ತುಹಾಕಿಬಿಡಬೇಕು. ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟುಹೋಗುವಂಥದು. ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ"(ಎಫೆಸ4:22–24).

ನಾವು ಮಾಡಬಾರದವುಗಳು ಮತ್ತು ಆ ರೀತಿಯಾಗಿ ವ್ಯವಹರಿಸಭಾರದಂತೆ ಕೆಲವು ಸಂಗತಿಗಳ ಪಟ್ಟಿಯನ್ನು ತಿಳಿಸಿದ್ದಾನೆ. "ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಇವೆ; ಯಾವವೆಂದರೆ–ಜಾರತ್ವ ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೆಕಿಚ್ಚು ಸಿಟ್ಟು ಕಕ್ಷಭೇದ ಭಿನ್ನಮತ ಮತ್ಸರ ಕುಡಿಕತನ ದುಂದೌತಣ ಇಂಥವುಗಳೇ. ಇವುಗಳ ವಿಷಯದಲ್ಲಿ–ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಹೀಗಲೂ ನಿಮ್ಮನ್ನು ಎಚ್ಚರಿಸುತ್ತೇನೆ"(ಗಲತ್ಯ5:19–22).

ಕೊನೆಯದಾಗಿ ಯೋಹಾನನು ಈ ರೀತಿ ಹೇಳಿದ್ದಾನೆ. "ಆದರೆ ಹೇಡಿಗಳು ನಂಬಿಕೆ ಇಲ್ಲದವರು, ಅಸಹ್ಯರಾದದ್ದರಲ್ಲಿ ಸೇರಿದವರು, ಕೊಲೆಗಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೇ ಮರಣವು ಎಂದು ನನಗೆ ಹೇಳಿದನು"(ಪ್ರಕಟನೆ21:8).

ನಾವು ಯಾವುದನ್ನು ವಿಸರ್ಜಿಸಬೇಕು ಮತ್ತು ಯಾವುದನ್ನು ಧರಿಸಿಕೊಳ್ಳಬೇಕು ಎಂದು ಹೀಗೆ ಹೇಳಲಾಗಿದೆ "ಆದಕಾರಣ ಸುಳ್ಳಾಡುವುದನ್ನು ಬಿಟ್ಟು ಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ ಯಾಕೆಂದರೆ ನಾವು ಒಬ್ಬರಿಗೊಬ್ಬರು ಅಂಗಾಗಗಳಾಗಿದ್ದೇವಲ್ಲಾ. ಕೋಪಮಾಡಬೇಕಾದರೂ ಪಾಪ ಮಾಡಬೇಡಿರಿ; ಸೂರ್ಯನು

ಮುಳುಗುವುದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ; ಸೈತಾನನಿಗೆ ಅವಕಾಶಕೊಡಬೇಡಿರಿ. ಕಳವು ಮಾಡುವವನು ಇನ್ನು ಮೇಲೆ ಕಳವು ಮಾಡದೆ ಕೈಯಿಂದ ಯಾವದೊಂದು ಉದ್ಯೋಗವನ್ನು ಮಾಡಿ ದುಡಿಯಲಿ; ಆಗ ಕಷ್ಟದಲ್ಲಿರುವವರಿಗೆ ಕೊಡುವುದಕ್ಕೆ ಅವನಿಂದಾಗುವುದು ನಿಮ್ಮ ಬಾಯಿಂದ ಯಾವ ಕೆಟ್ಟ ಮಾತು ಹೊರಡಬಾರದು ಭಕ್ತಿಯನ್ನು ವೃದ್ಧಿ ಮಡುವಂತ ಕಲೋಚಿತವಾದ ಮಾತು ಇದ್ದರೆ ಕೆಲವವರ ಹಿತಕ್ಕಾಗಿ ಆಡಿರಿ. ದೇವರ ಪವಿತ್ರಾತ್ಮನನ್ನು ದುಃಖ ಪಡಿಸಬೇಡಿರಿ"(ಎಫೆಸ4:25–30).

ಆತನ ಸಂದೇಶವನ್ನು ಕೇಳಿ ಒಳಗಾಗಿ ದೇವರೊಂದಿಗೆ ಸಮಾಧಾನ ಹೊಂದಿದ್ದೆವಾ ಮತ್ತು ಆತನನ್ನು ಸಂತೋಷಪಡಿಸುವ ಸಂಗತಿಗಳನ್ನು ಹೊಂದಿದ್ದರೆ ನಾವು ಆತನಂತೆ ಮಾರ್ಪಡುವೆವು.

ಪ್ರಶ್ನೆಗಳು:

1.ಯೇಸು ಹೇಳಿರುವಂತೆ ಎರಡು ಆಜ್ಞೆಗಳು ಯಾವುವೆಂದರೆ ದೇವರನ್ನು ಪ್ರೀತಿಸುವುದು ಮತ್ತು ನಿನ್ನಂತೆ ನಿನ್ನ ನೆರೆಯವರನ್ನು ಪ್ರೀತಿಸುವುದು.

**a.**ಸರಿ **b.**ತಪ್ಪು

2.ಸರ್ವಸಂಪೂರ್ಣತೆಯಲ್ಲಿ ಏನು ನೆಲೆಗೊಂಡಿದೆ(ಅಡಕವಾಗಿದೆ).

**a.**ವಿಶ್ವಾಸ **b.**ನಿರೀಕ್ಷಣೆ **c.**ಪ್ರೀತಿ

3.ಆತ್ಮನಿಂದ ನಡೆಸಲ್ಪಡುವವರು ಕ್ರೈಸ್ತವರು.

**a.**ಗರ್ವಿಷ್ಟರಾಗಿರುವುದಿಲ್ಲ.

**b.**ಅವರು ಯಾರನ್ನು ಸಿಟ್ಟುಗೊಳಿಸುವುದಿಲ್ಲ

**c.**ಅಸೂಹೆ ಪಡುವುದಿಲ್ಲ

**d.**ಮೇಲಿನ ಎಲ್ಲವೂ

4.ಶರೀರ ಸಬಂಧವಾದ ಕಾರ್ಯಗಳಲ್ಲಿ ಪಾಲುಗೊಳ್ಳುವುದಾದರೆ ಅವರು ದೇವರ ರಾಜ್ಯದಲ್ಲಿ ಪ್ರವೇಶಿಸುವುದಿಲ್ಲ ಎಂದು ಗಲತ್ಯದಲ್ಲಿರುವ ಕ್ರೈಸ್ತರಿಗೆ ಬರೆಯಲ್ಪಟ್ಟಿದೆ.

**a.**ಸರಿ **b.**ತಪ್ಪು

5.ಶರೀರ ಸ್ವಭಾವವನ್ನು ಬಿಟ್ಟು ಬಿಟ್ಟು, ಇನು ಮುಂದೆ ಕಳ್ಳತನವನ್ನು ಮಾಡಬಾರದು, ಸೈತಾನನ ಮಾತುಗಳನ್ನು ಮಾತನಾಡಬಾರದು ಮತ್ತು ಪರಿಶುದ್ಧಾತ್ಮನನ್ನು ದುಃಖ ಪಡಿಸಬಾರದೆಂದು ಅಪೊಸ್ತಲನಾದ ಪೌಲನು ಯಾರಿಗೆ ಹೇಳಿದ್ದಾನೆ.

**a.ಕ್ರೈಸ್ತರಿಗೆ      b.ಕ್ರೈಸ್ತರಲ್ಲದವರಿಗೆ**

***

## ಪಾಠ–26

## ಆತ್ಮಸಂಭದಿಗಳು ಮಾಡಬೇಕಾಗಿರುವ ಕೆಲಸಗಳು

**"ಸಮಾಧಾನ ಸಂದೇಶ"ದಿಂದ ಕೇಳಿದ ಉಪದೇಶಕ್ಕೆ ಒಳಪಟ್ಟು ನಾವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿದ್ದೇವೆ ಮತ್ತು.........**

**1.ಪಾಪದ ಪಾಲಿಗೆ ಸತ್ತಿದ್ದೇವೆ**

**2.ನೀರಿನಲ್ಲಿ ಮುಳಿಗಿಸುವುದರ ಮೂಲಕ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ**

**3.ಒಂದು ಹೊಸ ಜೀವವನ್ನು ಹೊಂದಿ ತಿರಿಗಿ ಎಬ್ಬಿಸಲ್ಪಟ್ಟಿದ್ದೇವೆ**

**4.ಕ್ರಿಸ್ತನಲ್ಲಿ ಕ್ರಿಸ್ತನಲ್ಲಿಗೆ, ಕ್ರಿಸ್ತನ ಶರೀರದಲ್ಲಿ ಸೇರಿಸಲ್ಪಟ್ಟಿದ್ದೇವೆ. ನಮಗೆ ಭೌತಿಕ ಶರೀರ ಇರುವುದಾದರೆ ಕ್ರಿಸ್ತನ ಶಿಷ್ಯರಾಗಿ ಕ್ರಿಸ್ತನಲ್ಲಿ ಆತ್ಮಸಂಭಂದವಾದ ದೇಹವಿದೆ ಶರೀರವು ಬೆಳೆಯಲು ಎಷ್ಟು ಕಾರ್ಯಗಳು ನಡೆಯಬೇಕೊ ಅದೇರೀತಿಯಾಗಿ ಆತ್ಮ ಸಂಬಧವಾದ ದೇಹಕ್ಕೆ ಕಾರ್ಯಗಳು ನಡೆಯಬೇಕು. ಆಗ ವಿವಿಧ ಭಾಗಗಳು ಅನೇಕ ತರವಾದ ಕೆಲಸವನ್ನು ಮಾಡುವವು.**

**ಮಾನವ ಶರೀರ ನಿರ್ಮಾಣದಂತೆ, ಕ್ರಿಸ್ತನ ಶಿಷ್ಯರಾಗಿ ನಾವು ಆತ್ಮ ಸಂಭಂದವಾದ ಶರೀರವಾಗಿ ಇದ್ದೇವೆ ಮತ್ತು ಭಾಗಗಳು ಹೇಗೊ ಅನೇಕ ಕೆಲಸಗಳನ್ನು ಮಾಡುತ್ತವೆಯೊ ಅದೇರೀತಿಯಾಗಿ ನಾವು ಸಹ ಕ್ರೈಸ್ತವರಾಗಿ ಅನೇಕ ಕೆಲಸಗಳನ್ನು ಹೊಂದಿದ್ದೇವೆ. "ಯಾಕೆಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವುದಿಲ್ಲವೋ ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ"(ರೋಮಾ12:4–5). ನಮಗೆ ಭೌತಿಕ ಶರೀರವಿದ್ದಂತೆ ಕ್ರಿಸ್ತನ ಶಿಷ್ಯರಾಗಿ ಕ್ರಿಸ್ತನಲ್ಲಿ ಆತ್ಮ ಸಂಭಂದವಾದ ಕಾರ್ಯಗಳು ನಡೆಯಬೇಕು. ಶರೀರವು ಉಲ್ಲಾಸವಾಗಿ, ಉತ್ಸಾಹವಾಗಿ, ಬಲವಾಗಿರುವುದಕ್ಕೆ ಅನೇಕ ಕಾರ್ಯಗಳು ನಡೆಯಬೇಕು. ಆಗ ವಿವಿಧ ಭಾಗಗಳು ಅನೇಕ ತರವಾದ ಕೆಲಸಗಳನ್ನು ಮಾಡುತ್ತವೆ.**

**"ಪೌಲನು ಸೆರೆಯಲ್ಲಿದ್ದಾಗ ಬರೆಯುತ್ತಾ ಆತ್ಮ ಸಬಂಧವಾದ ಕೆಲಸಗಳನ್ನು ಕುರಿತು ಆಳವಾದ ದೃಷ್ಟಿಯಿಟ್ಟು ಹೇಳಿದ್ದಾನೆ. ಅವುಗಳನ್ನೇ ವರಗಳಾಗಿ ಬರೆದನು. "ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು ನಿಮ್ಮನ್ನು ಪ್ರಬೋಧಿಸುತ್ತೇನೆ. ನೀವು ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೊಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು**

ಸಹಿಸಿಕೊಳ್ಳಿರಿ. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಆಸಕ್ತರಾಗಿರಿ. ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನ ದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ. ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯನಡಿಸುವವನೂ ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ"(ಎಫಸ4:1–6). ಎಂದು ಪೌಲನು ಅಂತರಂಗಗಳನ್ನು ಕುರಿತು ತಿಳಿಸಿದನು."(ಏರಿ ಹೋದನೆಂದು ಹೇಳಿದ್ದರಲ್ಲಿ ಭೂಮಿಯ ಅಧೋಭಾಗಕ್ಕೆ ಇಳಿದಿದ್ದನೆಂತಲೂ ಹೇಳಿದ ಹಾಗಾಯಿತಲ್ಲಾ. ಇಳಿದು ಬಂದವನು ಮೇಲಣ ಎಲ್ಲಾ ಲೋಕಗಳಿಗಿಂತ ಉನ್ನತವಾಗಿ ಏರಿಹೋದವನೇ. ಆದದರಿಂದ ಸಮಸ್ತ ಲೋಕವನ್ನು ತುಂಬಿದವನಾದನು.) ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗುಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಸೇವಕರನ್ನಾಗಿಯೂ ಉಪದೇಶಿಗರನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನಪರಿಪೂರ್ಣತೆಗೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಗೊಸ್ಕರವೂ ಸಭೆಯ ಸೇವೆಗೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು. ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೊ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯತೆಯನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು; ದೇಹವೆಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ"(ಎಫೆಸ4:9–16). ಆದರೆ ಸಾಧಾರಣವಾಗಿ ತಪ್ಪು ಕೃರವಾದ ಕಾರ್ಯಗಳನ್ನು ಕಾಣುವುದಿಲ್ಲ ಆದರೆ ಕೆಲವರಲ್ಲಿ ಅವು ಕಂಡುಬರುತ್ತವೆ.

"ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. ಬೋಧಿಸುವವನು ಬೋಧಿಸುವುದರಲ್ಲಿಯೂ ಬುದ್ಧಿ ಹೇಳುವವನು ಬುದ್ಧಿ ಹೇಳುವುದರಲ್ಲಿಯೂ ನಿರತನಾಗಿರಲಿ"(ರೋಮಾ12:6–8). ಇದರಿಂದ ಆತ್ಮ ಸಬಂಧವಾದ ದೇಹದ ಕಾರ್ಯಗಳು

ಕೆಳಗೆ ಕೊಡಲಾಗಿದೆ. ದೇವರೊಂದಿಗೆ ನಾವು ಯಾವ ರೀತಿ ಜೀವಿಸಬೇಕೆಂದು ರೋಮಾ 12ನೇ ಅಧ್ಯಾಯದಲ್ಲಿ ಈ ರೀತಿ ಹೇಳಲಾಗಿದೆ.

- ಪ್ರವಾದಿಸುವುದು, ನಮ್ಮ ವಿಶ್ವಾಸದ ಭಾಗವೆಂದು ಪ್ರವಾದಿಸು.
- ಸೇವೆ ಅಥವಾ ಪರಚರ್ಯ್ಯ, ನಮ್ಮ ಕೆಲಸದಲ್ಲಿ ಇಲ್ಲ ಸೇವೆ ಇಲ್ಲ ಪರಿಚರ್ಯ್ಯ– ನಮ್ಮ ಪರಿಚಯ್ಯದಲ್ಲಿ ನಡೆಸಿ
- ಬೋಧಿಸುವವನು ಬೋಧಿಸಲಿ.
- ಬುದ್ಧಿಹೇಳುವವನು ಬುದ್ಧಿ ಹೇಳಲಿ
- ದಾನಕೊಡುವವನು ಯಥಾರ್ಥ ಮನಸ್ಸಿನಿಂದ ಕೊಡಲಿ
- ಹಿರಿತನ ನಡೆಸುವವನು ಆಸಕ್ತಿಯಿಂದ ನಡಿಸಲಿ
- ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ
- ನಿಮ್ಮ ಪ್ರೀತಿಯು ನಿಷ್ಕಪಟವಾಗಿರಲಿ
- ಕ್ರೈಸ್ತ ಸಹೋದರರು ಒಬ್ಬರನ್ನೊಬ್ಬರು ಅಣ್ಣ ತಂಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ
- ಮಾನಮರ್ಯಾದೆಯನ್ನು ತೋರಿಸುವುದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ.
- ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ
- ಕ್ರೈಸ್ತರು ನಿರೀಕ್ಷಿಸುವ ಮಹಾ ಪದವಿಯನ್ನು ನೆನೆಸಿ ಉಲ್ಲಾಸವಾಗಿರ್ರಿ
- ಉಪದ್ರವದಲ್ಲಿ ಸೈರಣೆಯುಳ್ಳವರಾಗಿರ್ರಿ
- ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ
- ದೇವಜನರಿಗೆ ಕೊರತೆ ಬಂದಾಗ ಸಹಾಯ ಮಾಡಿರಿ
- ಅತಿಥಿಸತ್ಕರವನ್ನು ಅಭ್ಯಾಸಿಸಿರಿ
- ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ; ಶಪಿಸದೆ ಆಶೀರ್ವಾದಿಸಿರಿ
- ಸಂತೋಷಪಡುವವರ ಸಂಗಡ ಸಂತೋಷಪಡಿರಿ, ಅಳುವವರ ಸಂಗಡ ಅಳಿರಿ
- ನಿಮ್ಮ ನಿಮ್ಮೊಳಗೆ ಏಕ ಮನಸ್ಸುಳ್ಳವರಾಗಿರಿ
- ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಕೆಯಾಗಿರ್ರಿ
- ನಿಮ್ಮನ್ನು ನೀವೆ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ

- ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ
- ಎಲ್ಲರ ದ್ರಷ್ಟಿಗೆ ಯಾವುದು ಯೋಗ್ಯವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಮಗಡ ಸಮಾಧಾನದಿಂದಿರಿ
- ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವುದನ್ನು ದೇವರಿಗೆ ಬಿಡಿರಿ
- ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು. ಹೀಗೆ ಮಾಡುವುದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವುದು ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೆತನದಿಂದ ಕೆಟ್ಟತನವನ್ನು ಸೋಲಿಸು ಮತ್ತು ಆತನು ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರ ಯೋಗ್ಯಸ್ಥತಿಗೆ ತರುವುದಕೋಸ್ಕರವೂ ಸಭೆ ಸೇವೆಗೋಸ್ಕರವೂ ಕ್ರಿಸ್ತನ ದೇಹ ಅಭಿವೃದ್ಧಿ ಯಾಗುದಕ್ಕೋಸ್ಕರವೂ ಅತನು ಕೆಲವರನ್ನು ಅನುಗ್ರಹಿಸಿದನು "ಆತನು ಕೆಲವರನ್ನು ಅಪೊಸ್ತರನ್ನಾಗಿಯೂ, ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಗಿಯೂ ಸಭಾ ಪಾಲಕರನ್ನಾಗಿಯೂ ಉಪದೇಶಿಕರನ್ನಾಗಿಯೂ ಅನುಗ್ರಹಿಸಿದನು"(ಎಫೆಸ4:11).

ಆದ್ದರಿಂದ ಕ್ರಿಸ್ತನ ಶರೀರ ಅಂದರೆ ಸಭೆಯಲ್ಲಿ ನಾವೆಲ್ಲರು ಒಂದೇ ರೀತಿಯಾದ ಕಾರ್ಯಗಳುಳ್ಳುವರಾಗಿ ಇಲ್ಲ, ಆದರೆ ನಾವೆಲ್ಲರು ಸೇವೆ ಮಾಡುವ ಸೇವಕರು ಮಾಡಬೇಕಾದೆಲ್ಲವನ್ನೂ ಮತ್ತು ಜನರ ಮಧ್ಯ ಘನತೆಗೋಸ್ಕರ ಅಲ್ಲದೆ, ಒಬ್ಬರಿಗೊಬ್ಬರು ಘನವೆಂದು ತಿಳಿದುಕೊಳ್ಳಿಸಿ.

ಪ್ರಶ್ನೆಗಳು:

1.ಕ್ರಿಸ್ತನನ್ನು ಧರಿಸಿಕೊಂಡಿರುವವರೆಲ್ಲರನ್ನೂ ದೇವರು ಕ್ರಸ್ತನು ಸ್ಥಾಪಿಸಿರುವ ಸಭೆಯಲ್ಲಿ ಸೇರಿಸುತ್ತಿದ್ದಾನೆ.

a.ಸರಿ b.ತಪ್ಪು

2.ಕ್ರಿಸ್ತನ ಶರೀರವು ಅನೇಕ ಕೆಲಸಗಳನ್ನೊಳಗೊಂಡಿರುವಂತೆ ವ್ಯಕ್ತಿಗತವಾಗಿ ನಾವು ಸಹ ಅನೇಕ ಕಾರ್ಯಗಳನ್ನು ಮಾಡಬೇಕು.

a.ಸರಿ b.ತಪ್ಪು

3.ಅಪೊಸ್ತಲರು,ಪ್ರವಾದಿಗಳು,ಸೌವಾತಿಕರು,ಸಭಾಸೇವಕರು,ಉಪದೇಶಕರ ಕೆಲಸಗಳು.

a.ಪ್ರತೀ ಕ್ರೈಸ್ತವನಿಗೆ ಕೆಲಸಗಳನ್ನು ಅಥವಾ ಕಾರ್ಯಗಳನ್ನು ನೇಮಿಸುವುದು.

**b.**ಕ್ರೈಸ್ತರು ಪರಿಪೂರ್ಣರಾಗುವ ತನಕ ಸೇವೆ ಪರಿಚರ್ಯ್ಯದಲ್ಲಿ ಸಿದ್ಧಪಡಿಸುವುದು

**c.**ಮೇಲಿನ ಎಲ್ಲವೂ

4.ಸಭೆಯು ಐಕ್ಯತೆಯಿಂದಿರುವುದಕ್ಕೆ ನಾವು ದೇವರ ವಾಕ್ಯ ಜ್ಞಾನದಲ್ಲಿ ಅಭಿವೃದ್ಧಿಯಾಗುತ್ತಾ, ಸಭೆಯ ಕೆಲಸಗಳನ್ನು ಮಾಡಬೇಕು.

**a.**ಸರಿ **b.**ತಪ್ಪು

5.ಕ್ರೈಸ್ತರು ದೇವರ ಸೇವಕರು, ಯಜಮಾನನು ಏನು ಮಾಡಬೇಕೆಂದು ಬಯಸುತ್ತಿದ್ದಾನೊ ಅದನ್ನಲ್ಲದೆ ನಮಗೆ ಇಷ್ಟವಾದದ್ದನ್ನು ನಮಗೆ ಇಷ್ಟವಾದದ್ದನ್ನು ಆಯ್ಕೆ ಮಾಡಿಕೊಳ್ಳಬಹುದು.

**a.**ಸರಿ **b.**ತಪ್ಪು

***

## ಪಾಠ–27

## ನಂಬಿಕೆಯಲ್ಲಿ ನೆಲೆಗೊಂಡಿರುವುದು

ಒಬ್ಬ ವ್ಯಕ್ತಿ ಮೊದಲು ಸುವಾರ್ತೆಯನ್ನು ಕೇಳಿದಾಗ ಈ ವಿಷಯಗಳನ್ನು ಕೇಳಬೇಕು.

1.ಸುವಾರ್ತೆ ಸಂದೇಶ ಎಂದರೇನು(1ಕೊರಿಂಥ15:1–4)

- ಶರೀರಧಾರಿಯಾಗಿ ಭೂಮಿಗೆ ಬಂದ ದೇವರ ಮಗನು
- ನಮ್ಮ ಪಾಪಗಳ ನಿಮಿತ್ತ ಶಿಲಿಬೆಗೆ ಹಾಕಲ್ಪಟ್ಟನು
- ಸಮಾಧಿ ಮಾಡಲ್ಪಟ್ಟು ಮೂರನೇ ದಿನ ಎಬ್ಬಿಸಲ್ಪಟ್ಟನು
- ಆತನನ್ನು ಕುರಿತು ತಿಳಿದವರಿಗೆ ಕಾಣಿಸಿಕೊಂಡನು

2.ಆ ಸಂದೇಶಕ್ಕೆ ಸ್ಪಂದನೆ ಈ ರೀತಿಯಾಗಿರಬೇಕು.

- ಆತನು ದೇವರ ಮಗನು ಎಂದು ನಂಬುವುದು
- ಪಾಪಗಳ ನಿಮಿತ್ತವಾಗಿ ಮಾನಸಾಂತರ
- ನಡವಳಿಕೆಯನ್ನು ದೇವರ ಮಾರ್ಗದ ಕಡೆಗೆ ಬದಲಾಯಿಸುವುದು
- ಪಾಪದಲ್ಲಿ ಸತ್ತು ಅದನ್ನು ದೀಕ್ಷಾಸ್ನಾನದಲ್ಲಿ ಸಮಾಧಿ ಮಾಡುವುದು

3.ಅವರು ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗಿ ಎಬ್ಬಿಸಲ್ಪಟ್ಟು, ದೇವರ ಮಕ್ಕಳೆಂದು ಕರೆಯಲ್ಪಟ್ಟರು. ವಿಶ್ರಾಂತಿಯನ್ನು ದೇವರು ಸಿದ್ಧಮಾಡಿದ್ದಾನೆ ಆದರೆ ಸೈತಾನನು ಪ್ರತಿ ವಿಷಯದಲ್ಲಿಯೂ ನಮ್ಮ ಮೇಲೆ ಪ್ರಯೋಗ ಮಾಡಿ ನಮ್ಮನ್ನು ಮೊದಲಿನಂತೆ ಪಾಪದ ಜೀವಿತಕ್ಕೆ ಮಾರ್ಪಡಿಸಿದನು. ಪೇತ್ರನು ಹೀಗೆ ಬರೆದಿದ್ದಾನೆ “ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾಗಿ ಜ್ಞಾನ ಹೊಂದಿ ಲೋಕದ ಮಲಿನತ್ವಗಳಿಗೆ ತಪ್ಪಿಸಿಕೊಂಡವರು ತಿರಿಗಿ ಅವುಗಳಲ್ಲಿ ಸಿಕ್ಕಿಕೊಂಡು ಸೋತುಹೋದರೆ ಅವರ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ. ಅವರು ನೀತಿ ಮಾರ್ಗವನ್ನು ತಿಳಿದು ತಮಗೆ ಕೊಡಲ್ಪಟ್ಟ ಆಜ್ಞೆಯಿಂದ ತೊಲಗಿಹೋಗುವುದಕ್ಕಿಂತ ಆ ಮಾರ್ಗವನ್ನು ತಿಳಿಯದಿದ್ದರೆ ಮೇಲಾಗಿತ್ತು. ನಾಯಿ ತಾನು ಕಕ್ಕಿದ್ದನ್ನು ನೆಕ್ಕುವುದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವದಕ್ಕೆ ಹೋಯಿತು ಎಂಬ ನಿಜವಾದ ಗಾದೆಗೆ ಸರಿಯಾಗಿ ನಡೆದಿದ್ದಾರೆ”(2ಪೇತ್ರ2:20–21).

ಅಪೊಸ್ತಲನಾದ ಯೋಹಾನನು ಸಹ ಆಳವಾದ ಸಂದೇಶವನ್ನು ಕೊಟ್ಟಿದ್ದಾನೆ "ಬೆಳಕಿನಲ್ಲಿದ್ದೇನೆಂದು ಹೇಳಿಕೊಂಡು ತನ್ನ ಸಹೋದರನನ್ನು ದ್ವೇಷಿಸುವವನು ಈ ವರೆಗೂ ಕತ್ತಲೆಯಲ್ಲಿದ್ದಾನೆ"(1ಯೋಹಾನ2:9).

"ಲೋಕವನ್ನಾಗಲಿ ಲೋಕದಲ್ಲಿರುವವಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದವುಗಳಿಂದ ಹುಟ್ಟಿದವುಗಳಾಗಿವೆ. ಲೋಕವು ಅದರ ಆಶೆಯೂಗತಿಸಿ ಹೋಗುತ್ತವೆ. ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆದಿಗೂ ಇರುವನು(1ಯೋಹಾನ2:15–17).

"ತನ್ನ ಸಹೋದರನನ್ನು ದ್ವೇಷಿಸುವವನು ಕೊಲೆಗಾರನಾಗಿದ್ದಾನೆ ಮತ್ತು ಯಾವ ಕೊಲೆಗಾರನಲ್ಲಿಯೂ ನಿತ್ಯಜೀವವು ಇರುವುದಿಲ್ಲವೆಂಬದು ನಿಮಗೆಗೊತ್ತಾಗಿದೆ"(1ಯೋಹಾನ3:15).

"ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದರಲ್ಲಿ ಸೇರಿದವರು, ಕೊಲೆಗಾರರು,ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆ ಮರಣವು ಎಂದು ನನಗೆ ಹೇಳಿದನು"(ಪ್ರಕಟನೆ21:8).

"ನಾಯಿಗಳಂತಿರುವವರೂ ಮಾಟಗಾರರೂ ಜಾರರೂ ಕೊಲೆಗಾರರೂ ವಿಗ್ರಹಾರಾಧಕರೂ ಸುಳ್ಳುದದ್ದನ್ನು ಪ್ರೀತಿಸಿ ನಡಿಸುವವರೆಲ್ಲರೂ ಹೊರಗಿರುವರು ಎಂದು ಹೇಳಿದನು"(ಪ್ರಕಟನೆ22:15).

ಒಂದು ವೇಳೆ ಕ್ರೈಸ್ತರು ತಿರುಗಿ ಮತ್ತೇ ತನ್ನ ಹಳೆ ಜೀವಿತಕ್ಕೆ ಮರಳಿದರೆ ಅವರು ಎಷ್ಟು ಮಾತ್ರಕ್ಕೂ ಒಳ್ಳೆಯವರಲ್ಲ, ಕೆಟ್ಟವರಾಗಿಯೇ ಇರುವರು, ದೇವರಿಂದ ಹಿಂದಕ್ಕೆ ತಿರುಗಿದ ಅವರೇ ಬ್ರಷ್ಟತ್ವಕ್ಕೆ ದಾಸರಾಗಿದ್ದೂ ಅಂತವರಿಗೆ "ಸ್ವತಂತ್ರ್ಯ ಕೊಡುತ್ತೇವೆಂದು ಅವರಿಗೆ ವಾಗ್ದಾನ ಮಾಡುತ್ತಾರೆ, ಆದರೆ ಅವರೆ ಕೆಟ್ಟತನದ ದಾಸತ್ವದೊಳಗಿದ್ದಾರೆ. ಒಬ್ಬನು ಯಾವುದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ. ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನಹೊಂದಿ ಲೋಕದ ಮಾಲಿನ್ಯತ್ವಗಳಿಗೆ ತಪ್ಪಿಸಿಕೊಂಡವರು ತಿರಿಗಿ ಅವುಗಳಲ್ಲಿ ಸಿಕ್ಕಿಕೊಂಡು ಸೋತು ಹೋದರೆ ಅವರ ಅಂತ್ಯಸ್ಥಿತಿ ಮೊದಲಿಗಿಂತ ಕೆಟ್ಟದ್ದಾಗಿದೆ. ಅವರ ನೀತಿ ಮಾರ್ಗವನ್ನು ತಿಳಿದು ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿ ಹೋಗುವುದಕ್ಕಿಂತ ಆ ಮಾರ್ಗವನ್ನನು ತಿಳಿಯದಿದ್ದರೆ ಮೇಲಾಗಿತ್ತು. ನಾಯಿ ತಾನು

ಕಕ್ಕಿದ್ದನ್ನು ನೆಕ್ಕುವುದಕ್ಕೆ ತಿರುಗಿ ಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವುದಕ್ಕೆ ಹೋಯಿತು ಎಂಬ ನಿಜವಾದ ಗಾದೆಗೆ ಸರಿಯಾಗಿ ನಡೆದಿದ್ದಾರೆ(2ಪೇತ್ರ2:19–22). ಅವನಲ್ಲಿ ಆತನು ಎಷ್ಟು ಮಾತ್ರವು ಆನಂದಿಸುವುದಿಲ್ಲವೆಂದು ಇಬ್ರಿಯ ಗ್ರಂಥ ಕರ್ತನು ಹೀಗೆ ಬರೆದಿದ್ದಾನೆ "ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟು ಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲ ಉಂಟು. ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆ ಬೇಕು.ಬರುವಾತನು ಇನ್ನು ಸ್ವಲ್ಪಕಾಲದಲ್ಲಿ ಬರುವನು, ತಡಮಾಡುವುದಿಲ್ಲ; ಆದರೆ ನನ್ನವನಾಗಿರು ನೀತಿವಂತನು ನಂಬಿಕೆಯಿಂದಲೇ ಬದುಕುವನು; ಅವನು ಹಿಂದೆಗೆದರೆ ಅವನಲ್ಲಿ ನನಗೆ ಸಂತೋಷವಿರುವುದಿಲ್ಲ ಎಂದು ಬರೆದದೆ. ನಾವಾದರೋ ಹಿಂದೆಗೆದವರಾಗಿ ನಾಶವಾಗುವವರಲ್ಲ, ನಂಬುವವರಾಗಿ ಪ್ರಾಣ ರಕ್ಷಣೆಯನ್ನು ಹೊಂದುವವರಾಗಿದ್ದೇವೆ." (ಇಬ್ರಿಯ10:35–39).ನೀತಿವಂತರ ಮಾರ್ಗದಲ್ಲಿ ಹೋಗುವುದಕ್ಕೊ ಅದರಲ್ಲಿ ಪ್ರವೇಶಿಸಿದರೆ ಸಾಲದು ಯಾಕೆಂದರೆ ಒಬ್ಬನು ಕ್ರಿಸ್ತನಲ್ಲಿದ್ದು ತಿರಿಗಿ ತನ್ನ ಪಾಪದ ಜೀವಿತಕ್ಕೆ ತಿರುಗುವನು. ಮೊದಲನೇ ಶತಮಾನದಲ್ಲಿ ಸ್ಥಾಪಿಸಲ್ಪಟ್ಟ ಅಸ್ಯಸೀಮೆಯಲ್ಲಿನ ಏಳು ಸಭೆಗಳಿಗೆ ಹೇಳಿರುವ ಸಂದೇಶವನ್ನು ನೋಡೊಣ.ಇವುಗಳಲ್ಲಿ ಕೆಲವು ಸಭೆಗಳನ್ನು ಪೌಲನು ಸಂದರ್ಶಿಸಿದನು.

**1.ಎಫೆಸ:**

"ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು(ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ)ಎಫೆಸ2:4–5).

**2.ಸ್ಮುರ್ನ:**

" ನಿನಗೆ ಸಂಭವಿಸುವುದಕ್ಕಿರುವ ಬಾದೆಗಳಿಗೆ ಹೆದರಬೇಡ. ಇಗೋ ನೀವು ದುಷ್ಪ್ರೇರಣೆಗೆ ಒಳಗಾಗುವಂತೆ ಸೈತಾನನು ನಿಮ್ಮಲ್ಲಿ ಕೆಲವರನ್ನು ಸೆರೆಮನೆಯೊಳಗೆ ಹಾಕುವುದಕ್ಕಿದ್ದಾನೆ; ಮತ್ತು ಹತ್ತು ದಿವಸಗಳ ತನಕ ನಿಮಗೆ ಸಂಕಟವಿರುವುದು. ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" (ಪ್ರಕಟನೆ2:10).

**3.ಪೆರ್ಗಮ;**

"ಹದವಾದ ಇಬ್ಬಾಯಿ ಕತ್ತಿಯನ್ನು ಹಿಡಿದಾತನು ಹೇಳುವುದೇನೆಂದರೆ – ನೀನು ವಾಸಮಾಡುವ ಸ್ಥಳವನ್ನು ಬಲ್ಲೆನು: ಅದು ಸೈತಾನನ ಸಿಂಹಾಸನವಿರುವ ಸ್ಥಳವಾಗಿದೆ. ನೀನು ನನ್ನ ಹೆಸರನ್ನು ಬಿಡದೆ ಹಿಡಿದುಕೊಂಡಿದ್ದೀ; ನೀನು ಇರುವ ಸೈತಾನ ನಿವಾಸದಲ್ಲಿ ನನಗೆ ನಂಬಿಗಸ್ತನು ಸಾಕ್ಷಿಯು ಆದ ಅಂತಿಪನು ಕೊಲ್ಲಲ್ಪಟ್ಟ ದಿನಗಳಲ್ಲಿ ಯಾದರೂ ನನ್ನಲ್ಲಿಟ್ಟಿರುವ

ನಂಬಿಕೆಯನ್ನು ನೀನು ಮರೆಮಾಡಲಿಲ್ಲ. ಆದರೂ ಕೆಲವು ವಿಷಯಗಳಲ್ಲಿ ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ; ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವುದರಲ್ಲಿಯೂ ಜಾರತ್ವ ಮಾಡುವುದರಲ್ಲಿಯೂ ಇಸ್ರಾಯೇಲ್ಯರು ಮುಗ್ಗರಿಸಿ ಮುಗ್ಗರಿಸಿ ಬೀಳಬೇಕೆಂದು ಬಿಳಾಮನು ಬಾಲಾಕನಿಗೆ ಹೇಳಿದ ದುರ್ಬೋಧನೆಯನ್ನು ಅವಲಂಬಿಸಿರುವವರು ನನ್ನಲ್ಲಿದ್ದಾರೆ"(ಪ್ರಕಟನೆ2:13–14).

"ಆದದರಿಂದ ದೇವರ ಕಡೆಗೆ ತಿರಿಗಿಕೊ, ತಿರಿಗಿಕೊಳ್ಳದಿದ್ದರೆ ನಾನು ಬೇಗನೆ ನಿನ್ನ ಬಳಿಗೆ ಬಂದು ನನ್ನ ಬಾಯಕತ್ತಿಯಿಂದ ಅವರ ಮೇಲೆ ಯುದ್ಧ ಮಾಡುವೆನು"(ಪ್ರಕಟನೆ2:16).

**4.ಥುವತ್ತೈರ:**

ಆದರೆ ನಿನ್ನ ಮೇಲೆ ಒಂದು ತಪ್ಪು ಹೋರಿಸಬೇಕಾಗುತ್ತದೆ; ಅದೇನೆಂದರೆ ಯೆಜೆಬೇಲೆಂಬ ಆ ಹೆಂಗಸು ತನ್ನನ್ನು ಪ್ರಾವದಿನಿಯೆಂದು ಹೇಳಿಕೊಂಡು ಜಾರತ್ವ ಮಾಡಬಹುದೆಂದು ವಿಗ್ರಹಗಳಿಗೆ ನೈವೆದ್ಯ ಮಾಡಿದ ಪದಾರ್ಥಗಳನ್ನು ತಿನ್ನಬಹುದೆಂದು ನನ್ನ ದಾಸರಿಗೆ ಬೋಧಿಸುತ್ತಾ ಅವರನ್ನು ತಪ್ಪಾದ ಮಾರ್ಗದಲ್ಲಿ ಸೇರಿಸುತ್ತಿರುವಲ್ಲಿ ನೀನು ಅವಳನ್ನು ತಡೆಯದೆ ಬಿಟ್ಟಿರುವದೆ"(ಪ್ರಕಟನೆ2:20).

**5.ಸಾರ್ದಿಸಿ:**

ಸಾರ್ದಿಸಿನಲ್ಲಿರುವ ಸಭೆಯ ದೂತನಿಗೆ ಬರೆ–ದೇವರ ಏಳು  ಆತ್ಮಗಳೂ ಏಳು ನಕ್ಷತ್ರಗಳೂ ಉಳ್ಳಾತನು ಹೇಳುವುದೇನೆಂದರೆ– ನಿನ್ನ ಕೃತ್ಯಗಳನ್ನು ಬಲ್ಲೆನು; ಜೀವಿಸುವವನು ಎಂದು ಹೆಸರು ನಿನಗಿದ್ದರೂ ಸತ್ತವನಾಗಿದ್ದೀ ಎಂಬುದನ್ನು ಬಲ್ಲೆನು. ಎಚ್ಚರವಾಗಿರು; ಸಾಯುವ ಹಾಗಿದ್ದ ಉಳಿದವುಗಳನ್ನು ದೃಡಪಡಿಸು. ನನ್ನ ದೇವರ ಮುಂದೆ ನಿನ್ನ ಕೃತ್ಯಗಳಲ್ಲಿ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ"(ಪ್ರಕಟನೆ3:1–2).

**6.ಲವೊದಿಕೀಯ:**

ನಿನ್ನ ಕೃತ್ಯಗಳನ್ನು ಬಲ್ಲೆನು; ನೀನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ; ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇದ್ದರೆ ಒಳ್ಳೆದಾಗಿತ್ತು. ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೇ ಉಗುರು ಬೆಚ್ಚಗಾಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು"(ಪ್ರಕಟನೆ3:15–16).

"ಆದಕಾರಣ ನಿಂತಿದ್ದೇನೆಂದು ನೆನೆಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ"(1ಕೊರಿಂಥಿ10:12).

ಪ್ರಶ್ನೆಗಳು:

1.ಒಬ್ಬ ಕ್ರೈಸ್ತನು ನೀತಿ ಮಾರ್ಗದಲ್ಲಿ ಜೀವಿಸುವುದರಲ್ಲಿ ಮುಂದುವರಿಯದೆ ಕೆಟ್ಟವನಾಗಿ ಬದಲಾಗುವನು ಎಂದು ಪೇತ್ರನು ಹೇಳುತ್ತಿದ್ದಾನೆ.

a.ಸರಿ b.ತಪ್ಪು

2.ಶರೀರ ಸಂಭದವಾದ ಕಾರ್ಯಗಳ ಮೇಲೆ ಹಿಂದಕ್ಕೆ ತಿರಿಗಿದರೆ ಅವರು ದೇವರ ರಾಜ್ಯವನ್ನು ಸ್ವತಂತ್ರಿಸಿಕೊಳ್ಳುವುದಿಲ್ಲವೆಂದು ಗಲತ್ಯದಲ್ಲಿರುವ ಕ್ರೈಸ್ತರಿಗೆ ಪೌಲನು ಬರೆದು.

a.ಸರಿ b.ತಪ್ಪು

3.ಒಬ್ಬ ಕ್ರೈಸ್ತನು ಕತ್ತಲೆಯಲ್ಲಿ ಇರುವನೆಂದು ಯೋಹಾನನು ಹೇಳಿದನು.

a.ಸರಿ b.ತಪ್ಪು

4. ಯಾರ ಮೇಲೆ ದೇವರ ಕೊಪವು ತೋರಿಬರುತ್ತದೆ?

a.ಅವಿಧೇಯರ ಮೇಲೆ b.ದುರ್ಮಾಗಿಗಳ ಮೇಲೆ

c.ಸತ್ಯವನ್ನು ಅಣಗಿಸುವವರು d.ಮೇಲಿನ ಎಲ್ಲವೂ

5.ಲೋಕವು ಅದರ ಆಸೆಗಳು ಗತಿಸಿಹೋದವು ಆದರೆ ದೇವರ ಚಿತ್ತವು ನಿತ್ಯವೂ ಇರುವುದು.

a.ಸರಿ b.ತಪ್ಪು

***

## ಪಾಠ–28

## ಹೊಸ ಒಡಂಬಡಿಕೆ ಆರಾಧನೆ

"ಅದಿರಲಿ; ಸತ್ಯಭಾವದಿಂದ ದೇವಾರಾಧನೆ ಮಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದದೆ" ಯೋಹಾನ4:23. ಹಣ ಮತ್ತು ವಸ್ತುಗಳನ್ನು ಕೆಲವರು ಆರಾಧಿಸುವರು(ಪೂಜಿಸುವರು) ಇದು ನಿಜವಾದ ಆರಾಧಯಾ? ಅಲ್ಲ. ಆರಾಧನೆ ಎನ್ನುವುದು ನಂಬಿಕೆ, ವಿಧೇಯತೆ, ಪ್ರೀತಿ ಇವುಗಳ ಭಾವನೆಗಳಿಂದ ಮತ್ತು ಸ್ತುತಿ ಗೌರವಗಳ ಕ್ರಿಯೆಗಳನ್ನು ಒಳಗೊಂಡಿದೆ. ಆರಾಧನೆ ಒಂದು ಆಚಾರ, ಪದ್ಧತಿ, ಪ್ರಯೋಗ, ಮತ ಪರವಾದದ್ದಲ್ಲ.

- ಇತರರು ಪ್ರಾಣಿಗಳನ್ನು ಬಲಿಕೊಡುವುದರ ಮೂಲಕ ಆರಾಧಿಸಿದರು.
- ಇಸ್ರಾಯೆಲ್ಯರು ಪೂರ್ಣಾಂಗವಾದ ಬಲಿಯನ್ನು ಮತ್ತು ದಹನ ಬಲಿಯನ್ನು ಅರ್ಪಿಸಿ ಆರಾಧಿಸಿದರು.
- ದೇವರು ಲೋಕವನ್ನು ಪ್ರೀತಿಸಿ ತನ್ನ ಮಗನನ್ನು ಬಲಿಯನ್ನಾಗಿ ಅರ್ಪಿಸಿದನು.
- ಕ್ರಿಸ್ತನು ತನ್ನ ಶರೀವವನ್ನು ಪೂರ್ಣ ಬಲಿಯನ್ನಾಗಿ ಅರ್ಪಿಸಿದನು.
- ಆತನಲ್ಲಿ ನಂಬಕೆ ವಿಧೇಯತೆಯಿಂದ ಪಾಪ ಕ್ಷಮಾಪಣೆಉಂಟಾಗುತ್ತದೆ.
- ಕ್ರಿಸ್ತರು ಅವರ ದೇಹಗಳನ್ನು ಸಜೀವವಾಗಿ ಯಜ್ಞವನ್ನಾಗಿ ಅಪಿಸಬೇಕು.

### ಯಾರನ್ನು ಆರಾಧಿಸಬೇಕು:

ಕ್ರಿಸ್ತನಲ್ಲಿರುವವರಿಗೆ ಪೌಲನು ಈ ರೀತಿಹೇಳಿದ್ದಾನೆ "ಆದದರಿಂದ ಸಹೋದರರೇ, ದೇವರ ಕನಿಕರವನ್ನು ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ– ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು"(ರೋಮಾ12:1). ಸಜೀವ ಯಜ್ಞವಾಗಿ ಸಮರ್ಪಿಸಿಕೊಳ್ಳುವುದರಲ್ಲಿ, ವಸ್ತುವಿನ ಆಧ್ಯಾತ್ಮೀಕತೆ ಆರಾಧನೆಯಲ್ಲಿ ಬಹಳ ಮುಖ್ಯವಾದದ್ದು. ಒಬ್ಬ ಮನುಷ್ಯನ ಅಂತರಂಗದಲ್ಲಿ ಪ್ರೀತಿ, ಸಮಾಧಾನ, ಮತ್ತು ಕೃತಜ್ಞತೆ ವೈಕರಿಗಳಿರುವುದಾದರೆ, ಆಗ ಇವು ಯಾವುದೊ ಒಂದು ಮಾರ್ಗವು, ಮಾತುಗಳು, ಆಲೋಚನೆಗಳು ಮತ್ತು ಕ್ರಿಯೆಗಳ ಮೂಲಕ ವ್ಯಕ್ತಪಡಿಸುವುದಕ್ಕೆ ಒಂದು ಆಸೆ ಉಂಟಾಗುತ್ತದೆ. ಈ ರೀತಿ ವ್ಯಕ್ತೀಕರಣದಲ್ಲಿ ದೇವರ ಚಿತ್ತದ ಕಡೆಗೆ ನಡೆಸಲ್ಪಟ್ಟಾಗ ಅನೇಕ ವಿಧಗಳಾಗಿ ಅಂದರೆ ಅವಕಾಶಗಳನ್ನು ಹಿಡಿದು ಒಳ್ಳೆದನ್ನು ಮಾಡುವುದು, ಕ್ರೀರ್ತಿಸುವುದು, ಕೃತಜ್ಞತೆಯಿಂದ

ಪ್ರಾರ್ಥಿಸುವುದು ಇತರರಿಗೆ ಸಹಾಯ ಮಾಡುವುದರ ಮೂಲಕ ಕೊಡುವುದರಲ್ಲಿರುವ ಸಂತೋಷವು, ನಮ್ಮಲ್ಲಿ ದೇವರ ಸಂಕಲ್ಪವನ್ನು ತಿಳಿದುಕೊಳ್ಳುವುದಕ್ಕೆ ದೇವರ ವಾಕ್ಯವನ್ನು ಓದುವುದರಲ್ಲಿ ಮತ್ತು ಆತನನ್ನು ಸಂತೋಷಪಡಿಸುವಂತದ್ದು ನಡೆಯುತ್ತದೆ. ನಮಗೋಸ್ಕರ ಯೇಸು ಪರಿಪೂರ್ಣ ಬಲಿಯಾಗವನ್ನು ಜ್ಞಾಪಕ ಮಾಡಿಕೊಳ್ಳುವುದು ಮತ್ತು ದೇವರ ಹೋಲಿಕೆಯಲ್ಲಿ ನಮ್ಮನ್ನು ಕಾಣಿಸಿಕೊಳ್ಳವಂತೆ ಅನುದಿನವೂ ನಡೆದುಕೊಳ್ಳುವುದು.

ದೇವರು ಆತ್ಮ ಸ್ವರೂಪನು ಆದದ್ದರಿಂದ ಆತನನ್ನು ಆರಾಧಿಸುವವರು ಆತ್ಮೀಯ(ಭೌತಿಕವಾಗಿ ಅಲ್ಲ) ಮತ್ತು ಸತ್ಯತೆಯಿಂದ(ಆಚಾರಗಳಿಂದಲ್ಲ)ಆರಾಧಿಸಬೇಕು ಯೋಹಾನ4:24ರಲ್ಲಿ ಧೃಡಪಡಿಸಲಾಗಿದೆ. 'ದೇವರು ಆತ್ಮ' ಈ ಪದಗಳು ಸಾಧಾರಣವಾಗಿ ನಮ್ಮ ಕಿವಿಗಳಲ್ಲಿ ಯಾವಾಗಲೂ ಕೇಳದೆ ಇರುವ ಆಳವಾದ ಮುಖ್ಯವಾದ ಪದ. ಅವರಿಗೆ ಕಾಣಿಸಿದ ದೊಡ್ಡದಾಗಿ ಕಾಣಿಸಿದವುಗಳಲ್ಲಿ ಮಹಿಮೆಗಳು ಅವರಿಗೆ ನಿಜವಾಗಿ ಕಾಣುತ್ತವೆ. ಮತ್ತು ಅಪಾರ್ಥಮಾಡಿಕೊಂಡವರ ಅರ್ಥಗಳನ್ನು ಸರಿ ಮಾಡುವ ಪದಗಳು.

1.ದೇವರ ಅಸಾಧಾರಣ ಪದಗಳು. ಅ.ಕೃ7:48.

2.ದೇವರು ವಿಗ್ರಹಗಳಂತಹ ಒಂದು ವಸ್ತುವಲ್ಲ?

3.ಶಾಸ್ತ್ರಜ್ಞರು ಅಲೋಚಿಸುವುದಕ್ಕೆ ದೇವರು ಒಂದು ಪರಿಷ್ಕಾರಕ(ಸಂಶೋಧನೆ)ವಸ್ತುವಲ್ಲ.

4.ಮನುಷ್ಯರಿಗೆ ಉಪಯೋಗವಾಗುವ ದೇವಾಲಯ, ಬಲಿಗಳಿಗಿಂತ ದೊಡ್ಡವನು ದೇವರು ಅ.ಕೃ17:25.

## ಯಾವಾಗ ಆರಾಧಿಸಬೇಕು:

ಒಂದು ಸಜೀವವಾದ ಬಲಿಯಾಗವಾಗಿ ಜೀವಿಸುವುದರ ಮೂಲಕ ಪ್ರತಿ ವಿಷಯದಲ್ಲಿ ದೇವರಿಗೆ ಕೃತಜ್ಞತೆಯನ್ನು, ಮಹಿಮೆಯನ್ನು ಮತ್ತು ಸ್ತುತಿಗಳನ್ನು ಸಲ್ಲಿಸಬೇಕು.

- ದೇವರ ಮಕ್ಕಳು ಮತ್ತು ಇತರರಿಗೆ ಸಹಾಯವಾಗುವುದು.
- ಇತರರನ್ನು ಸಮರ್ಪಣೆ ಜೀವಿತದಲ್ಲಿ ಜೀವಿಸುವುದಕ್ಕೆ ಪ್ರೋತ್ಸಹಿಸುವುದು.
- ನಮ್ಮ ಕ್ರಿಸ್ತನಲ್ಲಿ ಕ್ಷಮಾಪಣೆ, ರಕ್ಷಣೆಯನ್ನು ಪ್ರಕಟಿಸುವುದು.
- ನಮ್ಮ ವಿಮೋಚಕನನ್ನು ಕುರಿತ ಸುವಾರ್ತೆಯನ್ನು ಪ್ರಕಟಿಸುವುದು.

ಆದ್ದರಿಂದ ನಾವು ದೇವರ ಸೇವೆಮಾಡುವುದು, ಬೋಧಿಸುವುದು, ಹಾಡುಗಳು, ಎಚ್ಚರಿಸುವುದು ಮತ್ತು ಸಾಮೂಹಿಕವಾಗಿ(ಗುಂಪಾಗಿ)ಕೂಡುವುದು, ಯಾವಾಗಾದರು

ಎಲ್ಲಿಯಾದರೂ ದೇವರನ್ನು ಮಹಿಮೆಪಡಿಸಬಹುದು ಮತ್ತು ಆರಾಧಿಸಬಹುದು. ಪರಿಶುದ್ಧ ಲೇಖನೆಗಳಲ್ಲಿ ಹೇಳಿರುವ ಪ್ರಕಾರ ಪ್ರತಿ ಭಾನುವಾರ ಆರಾಧಿಸಬೇಕು.

## ಎಲ್ಲಿ ಆರಾಧಿಸಬೇಕು:

ಸಮಾರ್ಯದ ಸ್ತ್ರಿಗೆ ಕ್ರಿಸ್ತನು ಹೀಗೆ ಹೇಳಿದನು "ಯೇಸು ಆಕೆಗೆ– ಅಮ್ಮ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ, ಆ ಕಾಲದಲ್ಲಿ ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವುದಿಲ್ಲ"(ಯೋಹಾನ4:21). ಒಂದು ಪ್ರತೇಕವಾದ ಭಾವನೆಗೆ ಹೋಗುವುದು ಇಲ್ಲ ಪ್ರತೇಕ ಸ್ಥಳಕ್ಕೆ ಹೋಗುವುದಕ್ಕೆ ದೇವರು ಕೊರಲಿಲ್ಲ, ಆದರೆ ಭೌತಿಕವಾದ ವಿಷಯಕ್ಕಿಂತ ಬೇರೆ ರೀತಿಯಾಗಿ ದೇವರು ಒಬ್ಬ ವ್ಯಕ್ತಿಯಿಂದ ಕೊರುತ್ತಿದ್ದಾನೆ ನಾವು ಸಮೂಹವಾಗಿ  ಇಲ್ಲ ಸಭೆಯಾಗಿ ಕೊಡುವುದರ ಮೂಲಕ ಅಂತರ್ಗತ ಭಾವನೆಗಳು ಪ್ರೋತ್ಸಹಿಸಲ್ಪಟ್ಟು ಸಭೆಯಾಗಿ ದೇವರನ್ನು ಆರಾಧಿಸುವೆವು.

## ಹೇಗೆ ಆರಾಧಿಸಬೇಕು:

ಏನು, ಯಾರು, ಯಾವಾಗ, ಎಲ್ಲಿ, ಎನ್ನುವ ವಿಷಯಯಗಳನ್ನು ಅರ್ಥ ಮಾಡಿಕೊಳ್ಳುವುದರಿಂದ ಹೇಗೆ ಆರಾಧಿಸಬೇಕೆಂದು ತಿಳಿದುಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಕ್ರಿಸ್ತನಲ್ಲಿ ನಾವು ನಂಬಿಕೆಯನ್ನ ಇರಿಸಿ ದೇವರನ್ನು ಘನಪಡಿಸುವುದು, ಸ್ತುತಿಸುವುದು ಮತ್ತು ಆರಾಧಿಸುವುದಕ್ಕೆ ನಮ್ಮ ಜೀವಿತಗಳನ್ನು ಸಜೀವ ಯಜ್ಞವಾಗಿ ಸಮರ್ಪಿಸುವುದರೊಂದಿಗೆ ವಾಕ್ಯೋಪದೇಶ ಕ್ರಮವನ್ನು ಅನುಸರಿಸಿ ಮಾಡಬೇಕು. ಒಬ್ಬನು ತನ್ನಲ್ಲಿನ ಆತ್ಮೀಯ ಭಾವನೆಗಳೊಂದಿಗೆ, ಅಂತರಂಗದಲ್ಲಿನ ಆಲೋಚನೆಗಳೊಂದಿಗೆ ಆತ್ಮವು ದೇವರನ್ನು ಆರಾಧಿಸಬೇಕು. ಆದರೆ ಪ್ರತಿ ದಿನದ ಕೆಲಸಗಳಂತೆ ಆರಾಧಿಸಬಾರದು.

ಆದ್ದರಿಂದ ಒಬ್ಬನ ಭಾವನೆಗಳು ಮತ್ತು ಆಲೋಚನೆಗಳು ದೈವ ಜ್ಞಾನದ ಮೇಲೆ ಆಧಾರವಾಗಿದ್ದರೆ, ಆತನು ದೇವರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನು ಹೊಂದಿರುವನು. ಆತನ ಅಂತರಂಗದಲ್ಲಿ ದೇವರನ್ನು ಸ್ತುತಿಸುವುದಕ್ಕೆ ಸಿದ್ಧವಾಗಿ ಒಂದು ಸಜೀವ ಸಮರ್ಪಣೆಯಾಗಿ ದೇವರಿಗೆ ಆತ್ಮದಿಂದ ಮತ್ತು ಸತ್ಯದಿಂದ ಆತನನ್ನು ಆರಾಧಿಸುವನು.

## ವ್ಯರ್ಥವಾದ ಆರಾಧನೆ:

ಮನುಷ್ಯನ ಅಂತರಂಗದಿಂದ  ಆತ್ಮೀಯತೆ, ಹಾಡುವುದು, ಆರಾಧನೆ ಭಾವನೆಗಳು, ಸ್ತುತಿಸುವಂತವುಗಳಲ್ಲಿಯೂ ದೇವರನ್ನು ಮಹಿಮೆಪಡಿಸುವಂತ ಸತ್ಕಾರ್ಯಗಳಿಂದ ಮನುಷ್ಯನು ದೇವರಿಂದ ಅಂಗೀಕರಿಸಲ್ಪಡುವನು ಆದರೆ ಒಬ್ಬನು ತನ್ನ ಅಂತರಂಗದಿಂದ ವ್ಯತಿರೇಕವಾದ ಕಾರ್ಯಗಳನ್ನು ಮಾಡುವ ಆರಾಧನೆಯನ್ನು ಅಂಗೀಕರಿಸುವುದಿಲ್ಲ. ಹೇಗೆಂದರೆ;

- ವ್ಯಕ್ತಿಗತ ಆಸೆಗಳಗನ್ನು ಈಡೇರಿಸಿಕೊಳ್ಳುವುದಕ್ಕೆ ಮಾಡುವ ಪ್ರಾರ್ಥನೆ.
- ವ್ಯಕಿಗತವಾಗಿ ಗುರ್ತಿಸಿಕೊಳ್ಳುವುದಕ್ಕೆ ಕೊಡುವ ಕಾಣಿಕೆ
- ದೇವರ ಆಲೋಚನೆ ಇಲ್ಲದೆ ಬಾಯಿಂದ ಹಾಡುಗಳನ್ನು ಹಾಡುವುದು.
- ಮನುಷ್ಯರನ್ನು ಮೆಚ್ಚಿಕೆಗೆ ಪ್ರಸಂಗಗಳು.

ದೇವರಿಗೆ ಕೃತಜ್ಞತೆಗಳನ್ನು ಹೇಳದೆ ಪಾಪ ಕ್ಷಮಾಪಣೆ, ಬಿಡುಗಡೆ, ಮತ್ತು ಸಮಾಧಾನಗಳನ್ನು ಕುರಿತು ಕ್ರಿಸ್ತನ ಪರಿಪೂರ್ಣಬಲಿಯಾಗವನ್ನು ಜ್ಞಾಪಕ ಮಾಡಿಕೊಳ್ಳದೆ ಕರ್ತನ ಬೋಜನದಲ್ಲಿ ಕೈಹಾಕುವುದು.

- ಸ್ವಾರ್ಥ, ಸ್ವಂತ ಸಂತೋಷಗೋಸ್ಕರ ಒಳ್ಳೆ ಕೆಲಸಗಳನ್ನು ಮಾಡುವುದು.

ದೇವರ ರಾಜ್ಯವು ನಿಜವಾಗಿ ನಿನ್ನಲ್ಲಿದ್ದರೆ ಆಗ ನಿನ್ನ ಪ್ರವರ್ತನೆಗಳು ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯಾಳತ್ವ, ಒಳ್ಳೆತನ, ವಿಶ್ವಾಸ, ಸಾತ್ವಿಕತೆ, ಆಶಾನಿಗ್ರಹ, ಇಂತಹ ಲಕ್ಷಣಗಳನ್ನು ನಿನ್ನ ಕ್ರಿಯೆಗಳಲ್ಲಿ ಪ್ರತಿಬಿಂಬಿಸುತ್ತವೆ.

ಪ್ರಶ್ನೆಗಳು:

1.ಯಾರನ್ನು ಆರಾಧಿಸಬೇಕು.

a.ಯೆಹೋವ ದೇವರು b.ಗುರುಗಳು

c.ಪ್ರವಾದಿಗಳು d.ಯೇಸು

2.ಯಾವಾಗ ನಾವು ಆರಾಧಿಸಬೇಕು?

a.ಪ್ರತಿ ಭಾನುವಾರ

b.ವಾರಕ್ಕೆ ಮೂರು ಸಾರಿ

3.ದೇವರನ್ನು ಆರಾಧಿಸುವುದಕ್ಕೆ ಒಬ್ಬನು ಒಂದು ಭವನಕ್ಕೆ ಇಲ್ಲ ಆಲಯಕ್ಕೆ ಹೋಗಬೇಕು.

a.ಸರಿ b.ತಪ್ಪು

4.ಆರಾಧನೆ ಅಂದರೆ

a.ಒಂದು ವಿಗ್ರಹವನ್ನು ಇಲ್ಲ ಒಂದು ಬಲಿಪೀಠದ ಮುಂದೆ ಸಾಸ್ಟಾಂಗ ನಮಸ್ಕರ ಮಾಡುವುದು.

b.ಯಾಜಕನಿಂದ ಮಾಡುವ ಒಂದೇ ಆಚಾರ

c.ಅಂತರಂಗದಲ್ಲಿನ ಭಾವನೆಗಳಿಂದ ದೇವರನ್ನು ಘನ ಪಡಿಸುವುದು

5.ಆರಾಧನೆ ಕಾರ್ಯವನ್ನು ವ್ಯರ್ಥವಾಗಿ ಮಾಡಬಾರದು ಯಾಕೆಂದರೆ ಎಲ್ಲಾ ವಿಧವಾದ ಆರಾಧನೆಯನ್ನು ದೇವರು ಅಂಗೀಕರಿಸುವುದಿಲ್ಲ

a.ಸರಿ b.ತಪ್ಪು

***

## ಪಾಠ–29

## ನಿತ್ಯಜೀವ ಅಥವಾ ನಿತ್ಯನರಕವನ್ನು ಆಯ್ಕೆಮಾಡಿಕೊಳ್ಳುವುದು

"ಯೆಹೋವನು ನುಡಿದಿದ್ದನ್ನು ಕೇಳು; ನೀನು ನಿನ್ನ ಒಬ್ಬನೇ ಮಗನನ್ನು ಸಮರ್ಪಿಸುವುದಕ್ಕೆ ಹಿಂದೆಗೆಯದೆ ಹೋದದ್ದರಿಂದ ನಾನು ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು; ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು; ಅದನ್ನು ಆಕಾಶದ ನಕ್ಷತ್ರಗಳಂತೆಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು; ಅವರು ಶತ್ರುಗಳ ಪಟ್ಟಣಗಳನ್ನು ಸ್ವಾಧೀನಮಾಡಿಕೊಳ್ಳುವರು; ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿ ಮೂಲಕ ಆಶೀರ್ವಾದ ಉಂಟಾಗುವದು ಎಂಬುದಾಗಿ ಯೆಹೋವನು ತನ್ನಾಣೆಯಿಟ್ಟು ಹೇಳಿದ್ದಾನೆ ಅಂದನು"(ಆದಿ22:16–18).

ಅನೇಕ ವರ್ಷಗಳ ನಂತರ ಅಬ್ರಹಾಮನ ಸಂತಾನವಾದ ಜನರಿಂದ ಒಬ್ಬನನ್ನು ಕುರಿತು ದೇವರು ಹೀಗೆ ಹೇಳಿದನು "ಆ ಮೇಲೆ ದೇವರು ಅವನನ್ನು ತೆಗೆದು ಹಾಕಿ ದಾವೀದನನ್ನು ಅದರ ಮೇಲೆ ಅರಸನನ್ನಾಗಿ ಮಾಡಿ–ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು, ಅವನು ನನಗೆ ಒಪ್ಪುವ ಮನುಷ್ಯನು, ಅವು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವನೆಂಬದಾಗಿ ಅವನ ವಿಷಯದಲ್ಲಿ ಸಾಕ್ಷಿ ಹೇಳಿದನು. ಅವನ ಸಂತಾನದಿಂದ ದೇವರು ತನ್ನ ವಾಗ್ದಾನದ ಪ್ರಕಾರ ಇಸ್ರಾಯೇಲ್ಯರಿಗೆ ಒಬ್ಬ ರಕ್ಷಕನನ್ನು ಹುಟ್ಟಿಸಿದ್ದಾನೆ"(ಅ.ಕೃ13:22–23). ಮಾನವ ಜನಾಂಗವನ್ನು ರಕ್ಷಿಸುವುದಕ್ಕೆ ಮತ್ತು ಅವರನ್ನು ದೇವರೊಂದಿಗೆ ಸಮಾಧಾನ ಪಡಿಸುವುದಗೋಸ್ಕರ ಅಬ್ರಹಾಮನ ಸಂತಾನದಿಂದ ರಕ್ಷಕನು ಬರುವನೆಂದು ಹಳೆ ಒಡಂಬಡಿಕೆಯಲ್ಲಿ ಅನೇಕ ಪ್ರವಾದಿಗಳು ಪ್ರವಾದಿಸಿದರು "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು. ನೀವು ಪುತ್ರರಾಗಿರುವುದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು"(ಗಲತ್ಯ4:4–6).

ಪ್ರವಾದನೆಗಳೆಲ್ಲವೂ ಯೇಸು ಕ್ರಿಸ್ತನಲ್ಲಿ ನೆರವೇರಿವೆ."ಮೋಶೆ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತೇನೆ– ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು

ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು"(ಮತ್ತಾಯ5:17–18).

"ಹೀಗಿರಲಾಗಿ ಆತನು ತಾನು ಬೆಳೆದ ನಜರೇತಿಗೆ ಬಂದು ತನ್ನ ವಾಡಿಕೆಯ ಪ್ರಕಾರ ಸಬ್ಬತ್ ದಿನದಲ್ಲಿ ಸಭಾಮಂದಿರಕ್ಕೆ ಹೋಗಿ ಓದುವುದಕ್ಕಾಗಿ ಎದ್ದು ನಿಂತನು. ಆಗ ಯೆಶಾಯನೆಂಬ ಪ್ರವಾದಿಯ ಗ್ರಂಥದ ಸುರುಳಿಯನ್ನು ಆತನ ಕೈಗೆ ಕೊಡಲಾಗಿ ಆತನು ಆ ಸುರುಳಿಯನ್ನು ಬಿಚ್ಚಿ ಮುಂದೆ ಹೇಳುವ ಮಾತು ಬರೆದಿರುವ ಸ್ಥಳವನ್ನು ಕಂಡು ಓದಿದನು; ಆ ಮಾತೇನೆಂದರೆ– ಕರ್ತನ ಆತ್ಮವು ನನ್ನ ಮೇಲೆ ಅದೆ. ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು. ಸೆರೆಯವರಿಗೆ ಬಿಡಗಡೆಯಾಗುವುದನ್ನು ಮತ್ತು ಕುರುಡರಿಗೆ ಕಣ್ಣುಬರುವುದನ್ನು ಪ್ರಸಿದ್ಧ ಪಡಿಸುವುದಕ್ಕೂ ಮನ ಮುರಿದವರನ್ನು ಬಿಡಿಸಿ ಕಳುಹಿಸುವುದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಆತನು ನನ್ನನ್ನು ಕಳುಹಿಸಿದ್ದಾನೆ ಎಂಬುದು. ಓದಿದ ಮೇಲೆ ಆತನು ಆ ಸುರಿಳಿಯನ್ನು ಸುತ್ತಿ ಸಭಾ ಮಂದಿರದ ಆಳಿನ ಕೈಗೆ ಕೊಟ್ಟು ಕೂತುಕೊಂಡನು. ಅಲ್ಲಿದ್ದವರೆಲ್ಲರ ಕಣ್ಣುಗಳು ಆತನ ಮೇಲೆಯೇ ಬಿದ್ದಿರಲಾಗಿ ಆತನು ಅವರಿಗೆ ಆ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ ಎಂದು ಹೇಳುತ್ತಿರುವಾಗ ಎಲ್ಲರು ಆತನನ್ನು ಹೊಗಳಿ ಆತನ ಬಾಯಿಂದ ಹೊರಡುವ ಇಂಪಾದ ಮಾತುಗಳಿಗೆ ಆಚ್ಚರ್ಯಪಟ್ಟು ಇವನು ಯೋಸೆಫನ ಮಗನಲ್ಲವೆ ಎಂದು ಮಾತಾಡಿಕೊಂಡರು."(ಲೂಕ4:16–21).

ಮನುಷ್ಯನ ಪಾಪ ಪರಿಹಾರ ಪರಿಪೂರ್ಣ ಬಲಿಯಾಗಿ ಸಮರ್ಪಿಸುವುದಕ್ಕೆ ಶರೀರದಲ್ಲಿರುವ ದೇವರ ಮಗನು(ಇಮ್ಮಾನುವೇಲ್)ತನ್ನ ಜೀವಿತದಲ್ಲಿ ಪಾಪವಿಲ್ಲದ ತನ್ನ ಶರೀರವನ್ನು ಅರ್ಪಿಸಿದನು. ಮನುಷ್ಯರೆಲ್ಲರೂ ಆತನಲ್ಲಿ ನಂಬಿಕೆಯನ್ನಿಟ್ಟು ಆತನಿಗೆ ಒಳಗಾಗಿ ಪಾಪ ಕ್ಷಮಾಪಣೆ ಹೊಂದುವುದಕ್ಕೆ ಈ ಬಲಿಯಾಗದ ಮೂಲಕ ನಮಗೆ ಅವಕಾಶ ಕಲ್ಪಿಸಿಕೊಡಲಾಯಿತು. ಆದ್ದರಿಂದ ಎಲ್ಲರು ಕ್ರಿಸ್ತನನ್ನು ಅಂಗೀಕರಿಸಿ ಆತನಲ್ಲಿ ಪಾಪಕ್ಷಮಾಪಣೆ ಎಂಬ ಬಹುಮಾನವನ್ನು ಹೊಂದುವುದಕ್ಕೆ ಆತನು ಕೊರುತ್ತಿದ್ದಾನೆ. "ಕರ್ತನು ತನ್ನ ವಾಗ್ದಾನವನ್ನು ನೆರವೆರಿಸುವುದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವುದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರಿಗಿಕೊಳ್ಳಬೇಕೆಂದು ಆಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ"(2ಪೇತ್ರ3:9).

## ಪಾಪ ಕ್ಷಮಾಪಣೆಯನ್ನು ಕುರಿತು:

ಕ್ರಿಸ್ತನ ಸುವಾರ್ತೆ ಸಂದೇಶವನ್ನು ಕೇಳಿದವರು ಆತನಲ್ಲಿ ವಿಶ್ವಾಸವನ್ನಿರಿಸಿ, ಅಂಗೀಕರಿಸಿ, ಪಾಪದಲ್ಲಿ ಮರಣಿಸುವುದಕ್ಕೆ ದೀಕ್ಷಾಸ್ನಾನ ಹೊಂದಿ, ಕ್ರಿಸ್ತನ ಮರಣದಲ್ಲಿ ಸಮಾಧಿ ಮಾಡಲ್ಪಟ್ಟು

ಮತ್ತು ಒಂದು ಹೊಸ ಸೃಷ್ಟಿಯಾಗಿ ಆತ್ಮ ಸಂಭಂದವಾಗಿ ದೇವರೊಂದಿಗೆ ಎಬ್ಬಿಸಲ್ಪಟ್ಟು ರಕ್ಷಣೆಹೊಂದಿದವರ ಅಂದರೆ ಕ್ರಿಸ್ತನ ಶರೀರ(ಸಭೆ)ದೊಂದಿಗೆ ಸೇರಿಸಲ್ಪಡುವರು. ಪರಿಶುದ್ಧಾತ್ಮನ ವರವನ್ನು, ಅವರು ಆತ್ಮ ಫಲವನ್ನು ಧರಿಸಿಕೊಳ್ಳುವರು "ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ ಪ್ರೀತಿ ಸಂತೋಷ ಸಮಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂತವುಗಳೇ"(ಗಲತ್ಯ5:22).

ನಿತ್ಯತ್ವದಲ್ಲಿ ಅವರು ಎಲ್ಲಿಇರಬೆಕು ಎನ್ನುವುದನ್ನು ಅವರ ಅನುದಿನದ ಜೀವಿತದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಮತ್ತು ಅವುಗಳನ್ನು ಅನುಸರಿಸುವುದರ ಮೇಲೆ ಇರುತ್ತದೆ, ಪ್ರೀತಿ ಸಂತೋಷ ಸಮಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಕನಿಕರ ಇವುಗಳೊಂದಿಗೆ ದೇವರೊಂದಿಗೆ ಇರುವುದಾ? ಅಥವಾ ಸುಳ್ಳುಗಾರನಿಗೆ ಜನಕ,ಮೋಸ, ಹತ್ಯೆ,ದುಷ್ಟನು, ಮತ್ತು ಅನೀತಿಗೆ ಕಾರಣನಾದ ಸೈತಾನನೊಂದಿಗಿರುವುದಾ...? ಎಂಬುದು ತೀರ್ಮಾನಿಸಲಾಗುವುದು. ಪರಲೋಕವು ದೇವರ ನಿವಾಸಸ್ಥಳ, ಸಮಸ್ತ ನೀತಿ ಉಂಟಾದ ಅದ್ಭುತವಾದದ್ದು ಪ್ರಭಾವದಂತಹ ಮನುಷ್ಯನ ಪರವಾಗಿ ವರ್ಣಿಸಲಾಗಿದೆ.

## ನಿತ್ಯಜೀವವು ಮತ್ತು ಪರಲೋಕ:

ಎ."ಆಗ ಇಗೋ, ಪರಲೋಕದಲ್ಲಿ ಒಂದು ಸಿಂಹಾಸನವಿತ್ತು; ಆ ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು. ಕೂತಿದ್ದವನು ಕಣ್ಣಿಗೆ ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣುತ್ತಿದ್ದನು. ಸಿಂಹಾಸನದ ಸುತ್ತಲು ಪಚ್ಚೆಯಂತೆ ತೋರುತ್ತಿದ್ದ ಮುಗಿಲು ಬಿಲ್ಲು ಇತ್ತು. ಇದಲ್ಲದೆ ಸಿಂಹಾಸನದ ಸುತ್ತಲು ಇಪ್ಪತ್ತು ನಾಲ್ಕು ಸಿಂಹಾಸನಗಳಿದ್ದವು; ಆ ಸಿಂಹಾಸನಗಳ ಮೇಲೆ ಶುಬ್ರವಸ್ತ್ರ ಧರಿಸಿಕೊಂಡಿದ್ದ ಇಪ್ಪತ್ತುನಾಲ್ಕು ಮಂದಿ ಹಿರಿಯರು ಕೊತಿದ್ದರು ಅವರ ತಲೆಯ ಮೇಲೆ ಚಿನ್ನದ ಕಿರೀಟಗಳಿದ್ದವು"(ಪ್ರಕಟನೆ4:2–4).

ಬಿ."ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು.ಇನ್ನು ಮರಣವಿರುವುದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವುದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೇ ಹೋಯಿತು ಎಂದು ಹೇಳಿತು"(ಪ್ರಕಟನೆ21:4).

ಸಿ."ಆ ಮೇಲೆ ಸಿಂಹಾಸನದ ಕಡೆಯಿಂದ ಬಂದ ಒಂದು ಶಬ್ಧವು–ದೇವರ ದಾಸರೆಲ್ಲರೇ, ದೇವರಿಗೆ ಭಯಪಡುವ ಹಿರಿಕಿರಿಯರೇ, ನಮ್ಮ ದೇವರನ್ನು ಕೊಂಡಾಡಿರಿ ಎಂದು ಹೇಳಿತು. ತರುವಾಯ ಜನರ ದೊಡ್ಡಗುಂಪಿನ ಶಬ್ಧದಂತೆಯೂ ಜಲಪ್ರವಾಹದ ಘೋಷದಂತೆಯೂ ಗಟ್ಟಿಯಾದ ಗುಡಗಿನ ಶಬ್ಧದಂತೆಯೂ ಇದ್ದ ಒಂದು ಶಬ್ಧವನ್ನು ಕೇಳಿದೆನು ಅದು ಹಲ್ಲೆಲೂಯಾ; ಸರ್ವಶಕ್ತನಾಗಿರುವ ನಮ್ಮ ದೇವರಾದ ಕರ್ತನು ಆಳುತ್ತಾನೆ; ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಳತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು

ಸಿದ್ಧಮಾಡಿಕೊಂಡಿದ್ದಾಳೆ ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ ಎಂದು ಹೇಳಿತು"(ಪ್ರಕಟನೆ19:5–8).

ಡಿ."ಪಟ್ಟಣದಲ್ಲಿ ನಾನು ದೇವಾಲಯವನ್ನು ಕಾಣಲಿಲ್ಲ ಯಾಕೆಂದರೆ ಸರ್ವಶಕ್ತನಾದ ದೇವರಾಗಿರುವ ಕರ್ತನು ಯಜ್ಞದ ಕುರಿಯಾದಾತನೂ ಅದರ ದೇವಾಲಯವಾಗಿದ್ದಾರೆ.ಪಟ್ಟಣಕ್ಕೆ ಬೆಳಕನ್ನು ಕೊಡುವುದಕ್ಕಾಗಿ ಸೂರ್ಯನಾಗಲಿ ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು ಯಜ್ಞದ ಕುರಿಯಾದಾತನೇ ಅದರ ದೀಪವು. ಅದರ ಬೆಳಕಿನಿಂದ ಸರ್ವಜನಾಂಗದವರು ಸಂಚಾರ ಮಾಡುವರು; ಭೂರಾಜರು ತಮ್ಮ ವೈಭವವನ್ನು ಅಲ್ಲಿಗೆ ತರುವರು. ಅದರ ಬಾಗಿಲುಗಳನ್ನು ಹಗಲಿನಲ್ಲಿ ಮುಚ್ಚುವುದೇ ಇಲ್ಲ. ರಾತ್ರಿಯಂತೂ ಅಲ್ಲಿಲ್ಲ"(ಪ್ರಕಟನೆ21:22–25).

## ನಿತ್ಯಮರಣ– ನರಕ:

ನರಕವು ಸೈತಾನನ ನಿವಾಸ ಸ್ಥಳ. ಅದರ ದೂತರು ಮತ್ತು ಸೇರಿಸುವವರೆಲ್ಲರೂ.

ಎ."ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನು ಕುರಿಗಳನ್ನು ಬೇರೆ ಬೆರೆ ಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆ ಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ತನ್ನ ಎಡಗಡೆಯಲ್ಲಿ ನಿಲ್ಲಿಸುವನು"(ಮತ್ತಾಯ25:32–33).

ಬಿ."ನನ್ನನ್ನು ಸ್ವಾಮಿ ಸ್ವಾಮೀ ಅನ್ನುವವರೆಲ್ಲರೂ ಪರಲೋಕ ರಾಜ್ಯಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಸೇರುವನು"(ಮತ್ತಾಯ7:21).

ಸಿ."ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂಬುದು ನಿಮಗೆ ತಿಳಿಯದೋ? ಮೋಸ ಹೋಗಬೆಡಿರಿ, ಜಾರರು ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು ಕಳ್ಳರು ಲೋಭಿಗಳು ಕುಡುಕರು ಬೈಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ"(1ಕೊರಿಂಥಿ6:9–10).

ಡಿ."ಶರೀರ ಭಾವದ ಕರ್ಮಗಳು ಪ್ರಸಿದ್ಧವಾಗಿಯೆ ಅವೆ; ಯಾವವೆಂದರೆ–ಜಾರತ್ವ ಬಂಡುತನ ನಾಚಿಕೆ ಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೆಕಿಚ್ಚು ಸಿಟ್ಟು ಕಕ್ಷಬೇಧ ಬಿನ್ನಮತ ಮತ್ಸರ ಕುಡಿಕತನ ದುಂದೌತಣ ಇಂಥವುಗಳೇ. ಇವುಗಳ ವಿಷಯದಲ್ಲಿ– ಇಂತ ಕಾರ್ಯಗಳನ್ನು ನಡೆಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ"(ಗಲತ್ಯ5:19–21).

ಡಿ."ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಾದಕರು ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು ಎಂದು ನನಗೆ ಹೇಳಿದನು"(ಪ್ರಕಟನೆ21:8).

ಪ್ರಶ್ನೆಗಳು:

1.ದೇವರು ಮನುಷ್ಯನಿಗಾಗಿ ಒಬ್ಬ ರಕ್ಷಕನನ್ನು ಕಳುಹಿಸಿಕೊಟ್ಟನಾ?

**a.**ಸರಿ **b.**ತಪ್ಪು

2.ರಕ್ಷಕನು ಎಂದರೆ ಯಾರು?

**a.**ತಂದೆ **b.**ಕ್ರೀಸ್ತನು

**c.**ಮನುಷ್ಯರು ಸಿದ್ಧಮಾಡಿದ್ದು **d.**ಮೇಲಿನ ಯಾವುದು ಅಲ್ಲ

3.ಮರಣದ ನಂತರ ಏನನ್ನು ಹೊಂದುವರು?

**a.**ನಿತ್ಯಜೀವ ಇಲ್ಲವೆ ನಿತ್ಯಮರಣ

**b.**ಯಾವುದು ಇಷ್ಟವಾದರೆ ಅದು

4.ಕ್ರಿಸ್ತನಲ್ಲಿರುವವೆಲ್ಲರೂ ನಂಬಿಕೆಯಲ್ಲಿ ನಿಂತುಕೊಂಡಿರಬೇಕು

**a.**ಸರಿ **b.**ತಪ್ಪು

5.ಅಂತ್ಯದಿನದಲ್ಲಿ ಭೂಮಿ ಮೇಲೆ ಯಾರು ರಕ್ಷಿಸಲ್ಪಡುವರು?

**a.**ಎಲ್ಲರು

**b.**ಕ್ರಿಸ್ತ ವಿಶ್ವಾಸಿಗಳು

**c.**ಬೇರೆ ದೇವತೆಗಳನ್ನು ಆರಾಧಿಸುವವರು

***

## ಪಾಠ–30

## ತೀರ್ಪು ಮತ್ತು ನಿತ್ಯತ್ವ

ಪರಿಮಿತವಾದ ನಮ್ಮ ಮನಸ್ಸಿಗೆ ನಿತ್ಯತ್ವವನ್ನು ಅವಗಾಹನೆ ಮಾಡಿಕೊಳ್ಳುವುದು ತುಂಬಾ ಕಷ್ಟ, ಆದರೂ ದೇವರು ಭೂಮ್ಯಾಕಾಶಗಳನ್ನು ಸೃಷ್ಟಿಸುವುದಕ್ಕೆ ಮೊದಲು ಇದ್ದನು ಮತ್ತು ಭೂಮ್ಯಾಕಾಶಗಳು ಗತಿಸಿಹೋದ ನಂತರವೂ ಇರುವನು. ಕ್ರಿಸ್ತನು ತಿರಿಗಿ ಬರುವಾಗ ಪ್ರತಿಯೊಬ್ಬರು ಅವರ ಸೃಷ್ಟಿಕರ್ತ ಅಂದರೆ ಸರ್ವೋನ್ನತನಾದ ದೇವರ ಮುಂದೆ, ಭೂಮಿಯ ಮೇಲೆ ಮಾಡಿದ ತಮ್ಮ ಕಾರ್ಯಗಳಿಗೆ ಲೆಕ್ಕ ಒಪ್ಪಿಸಬೇಕು.

ಆ ದಿನದಲ್ಲಿ ನಮಗೆ ಒಬ್ಬ ಶ್ರೇಷ್ಟನ್ಯಾಯವಾದಿಯಾದ ಯೇಸುವು ನಮ್ಮ ಪಕ್ಷದಲ್ಲಿರುವುದು ಎಷ್ಟೋ ಹೆಮ್ಮೆಯಾಗಿರುವುದು. "ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದ್ದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತಯೇ ನಾವು ಕೊಡ ಜೀವದಿಂದೆದ್ದು ಹೊಸಬರಾಗಿ ನಡೆದುಕೊಳ್ಳಬೇಕು"(ರೋಮಾ6:4). ಇದರಿಂದಾಗಿ ತನಗೆ ವಿಧೇಯರಾದ ನಂಬಿಗಸ್ಥರ ಪಕ್ಷವಾಗಿ ಆತನು ಮಾತಡುವನು. ಆಗ ದೇವರು ನಮ್ಮನ್ನು ತನ್ನ ಸನ್ನಿಧಿಯೊಳಗೆ ಆಹ್ವಾನಿಸುವನು. ಆಗ ನಾವು ನಿರಂತರವೂ ಆನಂದದಿಂದ ಆತನನ್ನು ಕೀರ್ತಿಸುತ್ತಾ ಮತ್ತು ಕೃತಜ್ಞತಾ ಸ್ತುತಿಗಳನ್ನು ಸಲ್ಲಿಸುತ್ತಾ ಇರುವೆವು. ಭಯವಿಲ್ಲದೆ, ಬಾಧೆಇಲ್ಲದೆ, ದುಃಖವಿಲ್ಲದೆ, ಅಳುಇಲ್ಲದೆ, ಕತ್ತಲ್ಲೆಯಿಲ್ಲದಿರುವ ಸ್ಥಳದಲ್ಲಿ ನಾವು ಇರಲು ಯೇಸು ನಮಗಾಗಿ ಮರಣಿಸಿದನು. ಅಲ್ಲಿ ಪ್ರೀತಿ, ಸಂತೋಷ, ಸಮಾಧಾನ, ಸತ್ಯ ಮತ್ತು ಯತಾರ್ಥತೆ ನಿರಂತರ ಇರುವುದು.

ಇನ್ನೊಂದು ರೀತಿಯಾದ ಸಮೂಹ ಪ್ರಜೆಗಳಿದ್ದಾರೆ. ಅವರಿಗೆ ಅವರ ಪಕ್ಷವಾಗಿ ನ್ಯಾಯವಾದಿ ಇಲ್ಲ. ಅವರ ಪರಿಸ್ಥಿತಿ ಹೇಗಿರುವುದು? ಅವರು ಲೋಕವು ತಮ್ಮ ಕೋರಿಕೆಗಳನ್ನು ತೀರಿಸಿಕೊಳ್ಳುತ್ತಾ ಒಳಗಾಗದೆ(ಒಳಪಡದೆ) ತಿರುಗಿಬಿದ್ದರು ಮತ್ತು ಅವರು ಸರ್ವೋನ್ನತನಾದ ದೇವರನ್ನು ಗುರಿತಿಸಲಿಲ್ಲ. "ಆದುದರಿಂದ ಎಲೈ.... ಮನುಷ್ಯನೆ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೆ ಉತ್ತರ ಹೇಳುವುದಕ್ಕೆ ನಿನಗೆ ಮಾರ್ಗವಿಲ್ಲ. ಹೇಗೆಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವುದರಿಂದ ನಿನ್ನನ್ನು ನೀನೆ ದೋಷಿಯೆಂದು ತೀರ್ಪುಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಆ ದೋಷಗಳನ್ನೆ ನಡೆಸುತ್ತಿಯಲ್ಲಾ. ಆದರೆ ಅಂತವುಗಳನ್ನು ಹೆದರಿಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವುದೆಂದು ಬಲ್ಲೆವು. ಎಲೈ ಮನುಷ್ಯನೆ ಅಂತವುಗಳನ್ನು ನಡೆಸುವವರಲ್ಲಿ ದೋಷವೆಣಿಸಿ ಅವುಗಳನ್ನೆ ಮಾಡುತ್ತಿರುವ ನೀನು ದೇವರ

ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೆನೆಂದು ಯೋಚಿಸುತ್ತಿಯಾ? ಆತನ ಅಪಾರವಾದ ದಯ ಸಹನ ದೀರ್ಘಶಾಂತಿಗಳನ್ನು ಅಸಡ್ಡೆಮಾಡುತ್ತಿಯಾ? ಮನಸನ್ನು ಬೇರೆ ಮಾಡಿಕೊಳ್ಳುವುದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರೇಪಿಸುತ್ತದೆಂಬುದು ನಿನಗೆ ಗೊತ್ತಿಲ್ಲವೆ? ನೀನು ನಿನ್ನ ಮೊಂಡತನವನ್ನು ಪಶ್ಚತಾಪವಿಲ್ಲದ ಮನಸನ್ನು ಅನುಸರಿಸುವುದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪು ಪ್ರಕಟವಾಗುವ ದಿವಸ ಬರುತ್ತದಷ್ಟೆ. ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು. ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೆದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು ಯಾರು ಸ್ವೇಚ್ಛೆವುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೊ ಅವರಿಗೆ ಕೊಪ ರೌದ್ರಗಳು ಬರುವವು. ಕೆಟ್ಟದ್ದನ್ನು ನಡೆಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು– ಯೆಹೊದ್ಯರಿಗೆ ಮೊದಲು ಅನಂತರ ಗ್ರೀಕರಿಗೆ ಸಹ ಆದರೆ ಒಳ್ಳೆದನ್ನು ನಡೆಸುವ ಪ್ರತಿಯೊಬ್ಬನಿಗೆ ಪ್ರಭಾವವು ಮಾನವು ಮನಶಾಂತಿಯೂ ಉಂಟಾಗುವವು–ಯಹೊದ್ಯರಿಗೆ ಮೊದಲು ಅನಂತರ ಗ್ರೀಕರಿಗೆ ಸಹ. ದೇವರಿಗೆ ಪಕ್ಷಪಾತವಿಲ್ಲ"(ರೋಮಾ2:1–10).

"ಆತನು ಲೋಕಾದಿಯಿಂದ ಎಷ್ಟೋ ಸಾರಿ ಬಾಧೆಪಟ್ಟು ಸಾಯಬೇಕಾಗಿತ್ತು. ಆದರೆ ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞ ಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು. ಒಂದೇ ಸಾರಿ ಸಾಯುವುದು ಆಮೇಲೆ ನ್ಯಾಯ ತೀರ್ಪು ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹು ಜನರ ಪಾಪಗಳನ್ನು ಹೊತ್ತುಕೊಳ್ಳುವುದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು ಮತ್ತು ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣೆಯನ್ನುಂಟುಮಾಡುವುದಕ್ಕೋಸ್ಕರ ಪಾಪ ಸಂಬಂಧವಿಲ್ಲದವನಾಗಿ ಎರಡನೆಯ ಸಾರಿ ಕಾಣಿಸಿಕೊಳ್ಳುವನು"(ಇಬ್ರಿಯ9:26–28).

## ಅಂತ್ಯದಿನದಲ್ಲಿ ಏನು ನಡೆಯುತ್ತದೆ:

ಕ್ರಿಸ್ತನ ಎರಡನೆಯ ಪ್ರತ್ಯಕ್ಷತೆಯನ್ನು ಕುರಿತು ಲೇಖನಗಳು ನಮಗೆ ಹೇಳುವ ಸಂಗತಿಗಳನ್ನು ಪರಿಶೀಲಿಸೋಣ.

**1.ಕರ್ತನು ಪ್ರತ್ಯಕ್ಷನಾಗುವನು:**

"ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ಧದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು"(2ಥೆಸಲೋನಿಕ4:16). ಆ ದಿನವು ಯಾವಾಗ ಬರುವುದೋ,

ಆವಾಗ ಭೂಮಿಯ ಮೇಲೆ ಇರುವ ಮನುಷ್ಯರೆಲ್ಲರು ಆ ಸ್ವರವನ್ನು ಕೇಳುವರು ಮತ್ತು ಕಣ್ಣು ರೆಪ್ಪೆ ಬಡಿಯುವಷ್ಟರಲ್ಲಿ ಕೊಂಡೊಯ್ಯಲ್ಪಡುವೆವು.

**2.ಸತ್ತವರು ಎಬ್ಬಿಸಲ್ಪಡುವರು:**

"ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೆ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು"(1ಕೊರಿಂಥ15:52). ಯೇಸು ಎರಡನೆಯ ಸಾರಿ ಬಂದಾಗ ಸತ್ತವರು ಸಮಾಧಿಗಳಿಂದ ಎಬ್ಬಿಸಲ್ಪಡುವರು.

**3.ಸಜೀವವಾಗಿರುವವರು ಮಾರ್ಪಡುವರು:**

"ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ–ನಾವೆಲ್ಲರು ನಿದ್ರೆಹೋಗುವುದಿಲ್ಲ; ಆದರೆ ಕಡೆಯ ತುತೂರಿ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು"(1ಕೊರಿಂಥ15:51). ಮೂರು ವಿಷಯಗಳು ಎಲ್ಲರು ತಿಳಿದಿರುವ ಹಾಗೆ ಆಗುವುದು.

**1.ಒಂದು ತುತೂರಿ ಧ್ವನಿ**

**2.ಪ್ರಧಾನ ದೂತನ ಸ್ವರ**

**3.ಅಲ್ಲಿಯವರೆಗೂ ಮರಣಿಸಿರುವವರು ಎಬ್ಬಿಸಲ್ಪಡುವರು ಮತ್ತು ಸಜೀವವಾಗಿರುವವರು ಮಾರ್ಪಡುವರು.**

**4.ಬೇರೆಮಾಡುವ ಕ್ರಿಯೆ–ತೀರ್ಪು:**

"ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆಬೇರೆ ಮಾಡುವ ಪ್ರಕಾರ ಆತನು ಅವರನ್ನು ಬೇರೆಬೇರೆ ಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ತನ್ನ ಎಡಗಡೆಯಲ್ಲಿ ನಿಲ್ಲಿಸುವನು"(ಮತ್ತಾಯ25:32–33).

**5.ನೀತಿವಂತರಿಗೆ ಸ್ವಾಸ್ತ್ಯವನ್ನು ಕೊಡುವುದು:**

"ಆಗ ಅರಸನು ತನ್ನ ಬಲಗಡೆಯಲ್ಲಿ ಇರುವವರಿಗೆ– ನನ್ನ ತಂದೆಯ ಆಶೀರ್ವಾದ ಹೊಂದಿದವರೆ ಬನ್ನಿರಿ. ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವನ್ನು ತೆಗೆದುಕೊಳ್ಳಿರಿ"(ಮತ್ತಾಯ25:34).

**6.ಅವಿಧೇಯರನ್ನು ಕುರಿತ ಮಾತು:**

**“ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ– ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ”(ಮತ್ತಾಯ25:41). ಪ್ರತ್ಯಕ್ಷತೆಯನ್ನು ನೋಡಿದ ನಂತರ ಯೋಹಾನನು ಹೀಗೆ ಹೇಳುತ್ತಿದ್ದಾನೆ. “ಇದಲ್ಲದೆ ಸತ್ತವರಾದ ದೊಡ್ಡವರು ಚಿಕ್ಕವರು ಸಿಂಹಾಸನದ ಮುಂದೆ ನಿಂತಿರುವುದನ್ನು ಕಂಡೆನು.....ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು”(ಪ್ರಕಟನೆ20:12).**

**7.ಭೂಲೋಕವು ನಾಶವಾಗುವುದು:**

**“.....ಆ ದಿನದಲ್ಲಿ ಆಕಾಶ ಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳು ಸುಟ್ಟುಹೋಗುವವು”(2ಪೇತ್ರ2:10).(ಅಂತರಿಕ್ಷ, ಪಕ್ಷಿಗಳು, ಮೇಘಗಳು, ಆಕಾಶ, ಸೂರ್ಯ ಚಂದ್ರ ನಕ್ಷತ್ರಗಳು ಮೊದಲಾದವುಗಳು ಲಯವಾಗುವವು).**

**ಭೂಮಿ ಮೇಲೆ ಕಾಲವು ಮುಕ್ತಾಯವಾಗುವುದು. ಹೀಗಾಗಲೇ ರಕ್ಷಣೆ ಎನ್ನುವ ದೇವರ ಬಹುಮಾನವನ್ನು ಹೊಂದಲು ತಡವಾಗಿದೆ. ಆದ್ದರಿಂದ ಈಗಲೇ ದೇವರನ್ನು ನಂಬು. ‘ ಇಂದೇ ರಕ್ಷಣೆಯದಿನ’.**

**ಪ್ರಶ್ನೆಗಳು:**

**1.ತೀರ್ಪಿನದಿನದಲ್ಲಿ ಕ್ರೈಸ್ತರಿಗೆ ಒಬ್ಬ ಉತ್ತರವಾದಿ ಅಥವಾ ನ್ಯಾಯವಾದಿ ಕ್ರಿಸ್ತನು ಇದ್ದಾನೆ ಮತ್ತು ಇವರು ದೀಕ್ಷಾಸ್ನಾನದ ಮೂಲಕ ಕ್ರಿಸ್ತನ ರಕ್ತದಲ್ಲಿ ತಮ್ಮ ಪಾಪಗಳನ್ನು ತೊಳೆದುಕೊಂಡಿದ್ದಾರೆಂದು ಹೇಳುವನು.**

**a.ಸರಿ b.ತಪು**

**2.ಕ್ರಿಸ್ತನ ಆಹ್ವಾನವನ್ನು ತಿರಸ್ಕರಿಸಿದವರೆಲ್ಲರನ್ನು ಸೈತಾನನು ಅವನ ದೂತರು ಅವರನ್ನು ಸೇರಿಸಿಕೊಳ್ಳಲು ಆಹ್ವಾನಿಸುವನು.**

**a.ಸರಿ b.ತಪ್ಪು**

**3.ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಮಾಡಿ, ದೇವರು ಮಾಡಿದವುಗಳೆಲ್ಲವುಗಳಲ್ಲಿ ನಿತ್ಯಶಕ್ತಿಯನ್ನು ಮತ್ತು ದೈವತ್ವವನ್ನು ಸ್ಪಷ್ಟವಾಗಿ ದೃಷ್ಯಮಾಡಿ ಅವರಿಗೆ ಅವಕಾಶವಿಲ್ಲದ ಹಾಗೆ ಮಾಡಿದನು.**

**a.**ಸರಿ **b.**ತಪ್ಪು

4.ಕ್ರಿಸ್ತನು ಬಂದಾಗ ಭೂಲೋಕಕ್ಕೆ ತನ್ನ ದೂತರನ್ನು ಕಳುಹಿಸಿ ಭಕ್ತಿಹೀನರನ್ನು ತನ್ನ ರಾಜ್ಯದೊಳಗಿನಿಂದ ಬೇರೆ ಮಾಡಿ ಉರಿಯುವ ಬೆಂಕಿಯಲ್ಲಿ ಹಾಕುವನು.

**a.**ಸರಿ **b.**ತಪ್ಪು

5.ಉರಿಯುವ ಬೆಂಕಿ ಅಥವಾ ನಿತ್ಯ ನರಕವು ಸೈತಾನನಿಗೂ ಅವನ ದೂತರಿಗೋಸ್ಕರ ಏರ್ಪಾಟು ಮಾಡಲ್ಪಟ್ಟಿದೆ.

**a.**ಸರಿ **b.**ತಪ್ಪು

***